ವಿಧಾನ ಮಂಡಲದ ಉಭಯ ಸದನಗಳನ್ನುದ್ದೇಶಿಸಿ ರಾಜ್ಯಪಾಲರು ಮಾಡಿದ ಭಾಷಣದ ಅಧಿಕೃತ ವರದಿ

ಸನ್ಮಾನ್ಯ ರಾಜ್ಯಪಾಲರಾದ ಪಿ. ವೆಂಕಟಸುಬ್ಬಯ್ಯನವರು

ಕರ್ನಾಟಕ ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನ ಸಂಯುಕ್ತಾಧಿವೇಶನವನ್ನುದ್ದೇಶಿಸಿ ವಿಧಾನಸಭೆಯ ಸಭಾಂಗಣದಲ್ಲಿ ಮಧ್ಯಾಹ್ನ ೪-೦೦ ಗಂಟೆಗೆ ಮಾಡಿದ ಭಾಷಣ

ಸೋಮವಾರ ೧೮ನೇ ಡಿಸೆಂಬರ್ ೧೯೮೪, ೨೭ ಮಾರ್ಗಶಿರ. ಸಾಯನಸೌರ ೧೯೦೦

ರಾಜ್ಯಪಾಲರು ಮಧ್ಯಾಹ್ನ ೪-೦೫ ಗಂಟೆಗೆ ವಿಧಾನ ಸೌಧದ ಮುಂಖ್ಯದ್ವಾರದ ಬಳಿ ಇರುವ ದ್ವಾರವಂಟಪಕ್ಕೆ ಆಗಮಿಸಿದರು. ರಾಜ್ಯಪಾಲರು ತಮ್ಮ ಕಾರಿನಿಂದ ಇಳಿದು ಬಳಿಕ ಅವರನ್ನು ಮಾನ್ಯ ಅಧ್ಯಕ್ಷರವರು, ಮಾನ್ಯ ಸಭಾಪತಿಯವರು ಮತ್ತು ವಿಧಾನ ಮಂಡಲದ ಕಾರ್ಯದರ್ಶಿಯವರು ಸ್ವಾಗತಿಸಿದರು. ನಂತರ ಪೂರ್ವಭಾಗದಲ್ಲಿರುವ ಲಿಫ್ಟ್‌ಗೆ ರಾಜ್ಯಪಾಲರನ್ನು ಕರೆದೊಯ್ಯಲಾಯಿತು. ಮೊದಲನೆಯ ಮಹಡಿಯಲ್ಲಿ ಲಿಫ್ಟ್‌ನಿಂದ ಹೊರಬಂದ ಬಳಿಕ, ಈ ಕೆಳಕಂಡ ಕ್ರಮದಲ್ಲಿ ಮೆರವಣಿಗೆಯನ್ನು ರೂಪಿಸಲಾಯಿತು.

ಕಾರ್ಯದರ್ಶಿಯವರು

ಮಾನ್ಯ ಅಧ್ಯಕ್ಷರು ಮಾನ್ಯ ಸಭಾಪತಿಯವರು.

ರಾಜ್ಯಪಾಲರು
ಎ.ಡಿ.ಸಿ.

ಈರೀತಿಯ ಮೆರವಣಿಗೆಯು ವಿಧಾನ ಸಭಾ ಸದನದ ಕಡೆಗೆ ಹೊರಟಿತು. ಸಭಾಸದನದ ದ್ವಾರದ ಬಳಿ ಮೆರವಣಿಗೆ ಬಂದ ಕೂಡಲೆ, ರಾಜ್ಯಪಾಲರ ಆಗಮನವನ್ನು ಮಾರ್ಷಲ್‌ರವರು ಸಭೆಗೆ ತಿಳಿಸಿದರು ಮತ್ತು ರಾಷ್ಟ್ರಗೀತೆಯನ್ನು ನುಡಿಸಲಾಯಿತು. ರಾಜ್ಯಪಾಲರು ಸದನವನ್ನು ಪ್ರವೇಶಿಸಿ ವೇದಿಕೆಯಮೇಲೆ ಕುಳಿತುಕೊಳ್ಳುವತನಕ ಮಾನ್ಯ ಸದಸ್ಯರುಗಳು ಎದ್ದು ನಿಂತುಕೊಂಡಿದ್ದರು.

ಸಭಾಸದನದ ವೇದಿಕೆಯು ಮುಂದೆ ಬಂದ ಬಳಿಕ ಮೆರವಣಿಗೆಯು ಇಬ್ಭಾಗವಾಯಿತು. ವೇದಿಕೆಯ ಮೇಲೆ ಮಾನ್ಯ ಅಧ್ಯಕ್ಷರವರು ರಾಜ್ಯಪಾಲರ ಬಲಭಾಗದಲ್ಲಿಯೂ, ಮಾನ್ಯ ಸಭಾಪತಿಯವರು ರಾಜ್ಯಪಾಲರ ಎಡಭಾಗದಲ್ಲಿಯೂ ಕುಳಿತುಕೊಂಡರು. ರಾಜ್ಯಪಾಲರು ವೇದಿಕೆಯ ಮಧ್ಯಭಾಗದಲ್ಲಿ ಆಸನದಲ್ಲಿ ಕುಳಿತುಕೊಂಡರು. ಕಾರ್ಯದರ್ಶಿಯವರು ವೇದಿಕೆಯ ಮುಂದುಗಡೆ ಇರುವ ಆಸನದಲ್ಲಿ ಕುಳಿತುಕೊಂಡರು.

ರಾಜ್ಯಪಾಲರ ಭಾಷಣ

ಸನ್ಮಾನ್ಯ ರಾಜ್ಯಪಾಲರು.— ಸಭಾಪತಿಗಳೆ, ಸಭಾಧ್ಯಕ್ಷರೆ,...

SRI B.I. PATIL.— His Excellency, the Marathi people of border areas have voted for M E S. The Maharashtra Karnataka border dispute has been pending unsolved for the last 33 years. We want quick solution for border dispute.

ಶ್ರೀ ವಾಟಾಳ್ ನಾಗರಾಜ್.—ಗಡಿ ಪ್ರಶ್ನೆ ಮುಗಿದು ಹೋಗ ಪ್ರಶ್ನೆ. ಮಹಾರಾಷ್ಟ್ರ ಏಕೀಕರಣ ಸಮಿತಿಗೆ ಧಿಕ್ಕಾರ. ಬೆಳಗಾಂ ಕನ್ನಡಿಗರದು. ಅಲ್ಲಿರುವವರು ಅಚ್ಚಕನ್ನಡಿಗರು. ಬೇರೆ ಮಾತೇ ಇಲ್ಲ. ಮಹಾರಾಷ್ಟ್ರ ಏಕೀಕರಣ ಸಮಿತಿಗೆ ಧಿಕ್ಕಾರ. ಗಡಿ ಪ್ರಶ್ನೆ ಇನ್ನಿಲ್ಲ. ಅದು ಮುಗಿದು ಹೋದ ಪ್ರಶ್ನೆ. ಮಹಾರಾಷ್ಟ್ರ ಏಕೀಕರಣ ಸಮಿತಿಗೆ ಧಿಕ್ಕಾರ.

SRI B. I. PATIL.— The border areas people have voted us to represent Marathi people and express their voice. This has not been solved till now. As a protest we are staging a walk-out. "Shivaji Maharaj ki Jai.

(The M.E S. Members staged a walk out)

ಶ್ರೀ ವಾಟಾಳ್ ನಾಗರಾಜ್.— ತಾವು ದಯವಿಟ್ಟು ಕನ್ನಡದಲ್ಲಿಯೇ ತಮ್ಮ ಸಮಗ್ರವಾದ ಭಾಷಣವನ್ನು ಓದಬೇಕು. ನಾನು ಅನೇಬಾರಿ ತಮ್ಮನ್ನು ಭೇಟಿ ಮಾಡಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳ ಕಡೆ ತಾವು ಗಮನ ಹರಿಸಿದ್ದೀರಿ. ಅವರು ನಗುನಗುತ್ತಾ ಏನೋ ಹೇಳಿದರು. ಅದು ಆಗಬಾರದು. ನಿಮ್ಮ ಭಾಷಣ ಕನ್ನಡದಲ್ಲಿಯೇ ಇರಬೇಕು. ತಾವು ಕನ್ನಡವನ್ನು ಚೆನ್ನಾಗಿ ಮಾತನಾಡುತ್ತೀರಿ. ನನ್ನ ಜೊತೆಯಲ್ಲಿ ಅನೇಕಬಾರಿ ಕನ್ನಡದಲ್ಲಿಯೇ ಮಾತನಾಡಿದ್ದೀರಿ. ಈ ಭಾಷಣವನ್ನು ಅಚ್ಚ ಕನ್ನಡದಲ್ಲಿ ಮಾಡಬೇಕು. ತಾವು ಪಕ್ಕದ ರಾಜ್ಯದವರು. ಕನ್ನಡದ ಬಗ್ಗೆ ತಾವು ಗಂಭೀರವಾದ ಗೌರವವನ್ನು ನೀಡುತ್ತಿದ್ದೀರಿ. ಎಲ್ಲಾ ಕಡೆ ತಾವು ಕನ್ನಡದಲ್ಲಿಯೇ ಮಾತನಾಡುತ್ತಿದ್ದೀರಿ. ಇಲ್ಲೂ ಸಹ ತಾವು ಕನ್ನಡದಲ್ಲಿಯೇ ಮಾತನಾಡಬೇಕು.

"ಸಿರಿಗನ್ನಡಂ ಗೆಲ್ಗೆ"

ಶ್ರೀ ಜಿ.ಎಂ. ಕಾನಡೆ.— ನೀವು ನಿಮ್ಮ ಮಕ್ಕಳನ್ನು ಇಂಗ್ಲೀಷ್ ಸ್ಕೂಲ್‌ಗೆ ಕಳುಹಿಸುತ್ತೀರಿ.

ಶ್ರೀ ವಾಟಾಳ್ ನಾಗರಾಜ್.— "ಸಿರಿಗನ್ನಡಂ ಗೆಲ್ಗೆ" ಕನ್ನಡ ನಾಡಿಗೆ ಜಯವಾಗಲಿ.

ಶ್ರೀ ಬಿ.ಎಂ. ಕಾನಡೆ.— ಇದು ಕನ್ನಡದ ನಾಟಕ.

ಸನ್ಮಾನ್ಯ ರಾಜ್ಯಪಾಲರು.—ಸಭಾಪತಿಗಳೇ, ಸಭಾದ್ಯಕ್ಷರೇ, ಹಾಗೂ ಸನ್ಮಾನ್ಯ ಸದಸ್ಯರೆ..., ರಾಜ್ಯ ವಿಧಾನ ಮಂಡಲದ ಈ ಜಂಟಿ ಅಧಿವೇಶನಕ್ಕೆ ತಮ್ಮೆಲ್ಲರನ್ನು ಸ್ವಾಗತಿಸಲು ನನಗೆ ತುಂಬಾ ಸಂತೋಷವಾಗುತ್ತಿದೆ. ವಿಧಾನ ಮಂಡಲಕ್ಕೆ ಮೊದಲಬಾರಿಗೆ ಕಾಲಿಡುತ್ತಿರುವ ಸದಸ್ಯರುಗಳಿಗೆ ವಿಶೇಷ ಸ್ವಾಗತ. ಈಗ ತಾನೇ ಚುನಾವಣೆ ಮುಗಿದಿದೆ. ಕರ್ನಾಟಕದ ಮಹಾಜನತೆ ನಿಮ್ಮ ಬಗ್ಗೆ ವಿಶ್ವಾಸ ನಂಬಿಕೆಗಳನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ಸದಸ್ಯರಾದ ತಾವು ಜನತೆ ನಿಮ್ಮಲ್ಲಿರಿಸಿರುವ ವಿಶ್ವಾಸ ಹಾಗೂ ನಂಬಿಕೆಗಳಿಗೆ ಪಾತ್ರವಾಗುವಂತಹ ರೀತಿಯಲಿ ನಡೆದುಕೊಳ್ಳುತ್ತೀರಿ ಎಂಬ ನಂಬಿಕೆ ನನಗಿದೆ.

All of us can take justifiable pride in the fact that the Elections in Karnataka were conducted in a peaceful and orderly manner. Credit for this should go to the people, the contesting candidates, political parties and the administration.

My Government has been elected to office with a massive mandate. The people of Karnataka have in no uncertain terms declared their preference for the new Government. Hopes and aspirations have been roused. Expectations are high. My Government is conscious of this and will do all in it's power, with utmost sincerity to fulfil the expectations of the people. The overwhelming support given to my Government in the Legislature casts upon it an increased responsibility. A constructive Opposition, no matter how small, is a prerequisite for a healthy democracy. My Government will therefore extend to the Opposition due respect and courtesy. In return, My Government requests the Opposition to function in a constructive manner and hopes that required co-operation would be forthcoming.

In a democracy like ours with a federal structure it is inevitable that a political party of one hue is elected to office in a State and a politcal party of another hue is elected to office at the Centre. In our country we have such a situation to-day. My Government takes this opportunity to emphatically state that it will offer whole-hearted and unstinted co-operation to the Government of India for the betterment of our people and the progress of our country. Where the unity and integrity of India and the welfare of her people

are concerned, we will not allow political considerations to influence our thinking.

My Government therefore pledges co-operation to the Government of India in its task of bringing peace, happiness and prosperity to our country My Government expects the Government of India also toreciprocate our sentiments and commitments.

In the governance of any State unfortunately, many situations arise which should not. My Government wishes to make it clear that it does not propose to be vindictive. If, however something has gone wrong, the law must take its natural course. My Government would rather expend its energies in a positive and constructive manner to ensure that the aspirations of the people are realised. What the people expect to-day is positive action-aimed at improving the quality of their life.

We have just concluded the year long celebrations to mark the Birth Centenary of that great freedom fighter, true democrat, Architect of modern India and the first Prime Minister of our country Pandit Jawaharlal Nehru: I hope and trust that while the younger generation is now aware of the life, philosophy and principles of Panditji, to the rest of us, it has meant a renewal of our commitment to democracy secularism and service to the Nation.

As I have stated earlier, the people of Karnataka have cast an onerous responsibility on my Government by giving a massive mandate. My Government promises to the people of Karnataka in all humility, and sincerity an honest responsive and efficient administration. For translating the policies and programmes of my Government, the bureacracy is the recognised and accepted instrument. Concerted efforts will be made to tone up the administration and to remove demoralisation that has set in due to unwarranted interference.

* *

The 20 Point Economic Programme first initiated by the late Prime Minister, Smt. Indira Gandhi will form the basis for the economic policies and programmes of my Government. My Government is of the considered view that for promoting social change and social justice, implementation of the 20 Point Economic Programme is a must. To this end, the 20 Point Economic Programme would be rejuvenated in Karnataka and closely monitored.

My Government is deeply committed to democratic decentralisation. Such institutions as have been set up in this direction will be suitably reorganised and strengthened wherever

---

* * (ಈ ಸಂದರ್ಭದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ಎಂ. ಇ. ಎಸ್.ಗೆ ಧಿಕ್ಕಾರವೆಂದು ಕೂಗುತ್ತಾ ರಾಜ್ಯಪಾಲರ ವೇದಿಕೆಯ ಬಳಿ ಬಂದು ಕಪ್ಪಿತುಕೊಂಡರು)

necessary so as to ensure that they are stable and in a position to fulfil the local aspirations and needs of the the people.

Elections have not been held for the Municipalities and Corporations in Karnataka for a number of years*.

If our towns and cities are to develop, they can do so only with the active co-operation and support of the people living therein. This is possible only when our towns and cities are governed by Elected Bodies. My Government therefore would hold elections to all Municipalities and Corporations in the State at the earliest. Elections to these bodies would not be further postponed on any account.

In the last few years, three important programmes have been introduced by our former Prime Minister, Sri Rajiv Gandhi, namely, the Jawahar Rozgar Yojana, the Nehru Rozgar Yojana and the Indira Awas Yojana. These are programmes aimed at improving the quality of life of our people in Urban and Rural Areas. It will be my Government's endeavour to ensure that these programmes which are aimed at alleviating rural and urban unemployment problems are implemented in all seriousness, thereby ensuring that there is a marked improvemant in the quality of the lives of our people. My Government expects the Government of India to continue funding these programmes. These programmes will be closely monitored at the highest level and corrective measures applied wherever necessary.

India is a land of villages with the majority of the population dependent upon Agriculture.

ಶ್ರೀ ಬಿ. ಎಸ್. ಯಡಿಯೂರಪ್ಪ.—ಘನಾ ರಾಜ್ಯಪಾಲರ ಭಾಷಣಕ್ಕೆ ಅಡಚಣೆ ಮಾಡಲು ಪ್ರಯತ್ನ ಮಾಡುವುದಿಲ್ಲ. ಈವತ್ತು ಏನು ಸತ್‌ಸಂಪ್ರದಾಯವನ್ನು ಪಾಲಿಕೊಂಡಿದ್ದೇವೆ ಅದನ್ನು ಮುಂಗಿಯಬೇಕೆಂಬ ಅಪೇಕ್ಷೆ ನನಗಿಲ್ಲ. ಆದರೆ ಒಂದು ವಿಷಯವನ್ನು ಹೇಳಲೇಬೇಕಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ರೈತರ ಸಾಲವನ್ನು ಮನ್ನ ಮಾಡುತ್ತೇವೆಂದು ಹೇಳಿಕೊಂಡು ಅಧಿಕಾರಕ್ಕೆ ಬಂದಿರುತ್ತಾರೆ. ಆದರೆ ರೈತರ ಸಾಲವನ್ನು ಮನ್ನ ಮಾಡುವ ಘೋಷಣೆ ಇದರಲ್ಲಿ ಇಲ್ಲ. ತಾವು ಅಧಿಕಾರಕ್ಕೆ ಬರುವ ಸಂದರ್ಭದಲ್ಲಿ ಸಾಲವನ್ನು ಮನ್ನ ಮಾಡುತ್ತೇವೆಂದು ಹೇಳಿದ್ದಿರಿ, ಘೋಷಣೆ ಮಾಡಿದ್ದೀರಿ. ಮೊನ್ನೆ ಚುನಾವಣೆಯಾದ ಮೇಲೆ ಹಿಮಾಚಲಪ್ರದೇಶ, ರಾಜಸ್ಥಾನ ಮುಂತಾದ ಕಡೆಗಳಲ್ಲಿ ರೈತರ ಸಾಲವನ್ನು ಮನ್ನ ಮಾಡಿದ್ದಾರೆ. ಚುನಾವಣೆಯಾಗಿದೆ. ಈಗ ನೀವು ಅಧಿಕಾರಕ್ಕೆ ಬಂದಿದ್ದೀರಿ. ರಾಜ್ಯ ರೈತರನ್ನು ನೀವು ಶೋಷಣೆ ಮಾಡುತ್ತಿದ್ದಿರಿ. ರಾಜ್ಯಪಾಲರ ಭಾಷಣದಲ್ಲಿ ರೈತರ ಸಾಲವನ್ನು ಮನ್ನ ಮಾಡುವ ಬಗ್ಗೆ ಏನು ಹೇಳಿಲ್ಲ. ಆದ್ದರಿಂದ ನಾನು ಪ್ರತಿಭಟನೆಯನ್ನು ಮಾಡಿ ಈ ಭಾಷಣವನ್ನು ಹರಿಯುತ್ತಿದ್ದೇನೆ.

(ಶ್ರೀ ಯಡಿಯೂರಪ್ಪನವರು ಸನ್ಮಾನ್ಯ ರಾಜ್ಯಪಾಲರ ಭಾಷಣದ ಪ್ರತಿಯನ್ನು ಹರಿದು ಹಾಕಿದರು)

ರೈತರ ವಿರೋಧಿ ಸರ್ಕಾರ ಇದು. ನಾನು ಪ್ರತಿಭಟನೆ ಮಾಡುತ್ತೇನೆ. ಮುಖ್ಯಮಂತ್ರಿಗಳು ರೈತರ ಸಾಲವನ್ನು ಮನ್ನ ಮಾಡುವ ಬಗ್ಗೆ ಸ್ಪಷ್ಟವಾದ ನಿಲುವನ್ನು ಹೇಳಬೇಕಾಗಿದೆ. ನಿಮ್ಮ ಸರ್ಕಾರದ ನೀತಿ ಏನೆಂಬುದನ್ನು ಹೇಳಬೇಕಾಗಿದೆ. ಸಾಲ ಮನ್ನ ಮಾಡದಿರುವ ನಿಮ್ಮ ನೀತಿಯನ್ನು ವಿರೋಧಿಸಿ ಪ್ರತಿಭಟನೆ ಮಾಡುತ್ತೇನೆ.

---

* ಕೆಲವು ವಿರೋಧಪಕ್ಷದ ಸದಸ್ಯರು ಸುಳ್ಳು ಎಂದು ಕೂಗಾಡಿದರು.

His Excellency The Governor of Karnataka :—

The situation is so in Karnataka too. If our State is to prosper and progress, prosperity and progress must start at the Village Level. With this in mind my Government is committed to give special priority to the Agricultural Sector. Farmers will be provided with all the inputs necessary by way of technical guidance, seeds, fertilizers and pesticides.

A majority of agricultural operations in Karnataka are in Dry Land Farming. My Government would therefore give specialt emphasis to Dry Land Farming through Water Shed Developmens Projects. Emphasis would also be given to the National Oil Seedl and Oil Seeds Production Thrust Programmes and the Nationa Pulses Development Programme.

Horticulture has an excellent potential in Karnataka: My Government will therefore seek to implement with such external assistance as may become available, an integrated production and marketing programme of certain Horticultural Crops. Similarly, my Government also proposes to seek external assistance for a Coconut Development Project which will ensure alround development of Coconut Plantations in the State.

A matter of deep concern to my Government is the escalation in the prices of efsential commodities and edible oils. The State has to depend on the Government of India for allocation from the Central Pool. My Government's first priority would be to ensure that allocations of essential commodities and edible oils from the Central Pool to Karnataka are increased considerably. Simultaneously it would be my Government to endeavour to open more Fair Price Shops and bring in larger segments of the population under the Public Distribution System, which would be reorganised thereby edsuring that the interest of vulnerable sections of our Society are taken care of. This would ensure that atleast the basic necessities of food would be met. Apart from food our people require shelter My Government would therefore give a new thrust to ensure that the siteless have sites and the houseless have a dwelling place. Time bound programmes in these too areas would be drawn up and closely monitored for their effective and timely implementation.

Safe and adequate drinking water will be provided to all habitations in the State under the Rural Water Supply Programme. While on the one hand. fresh habitations would be covered, on the other, gains achieved would be consoldidate. In other words, emphasis would be on adequacy of water supply.

My Government would lay increased emhasis on special economic programmes like Drought Prone Area Programmes, Integrated Rural Development Programme, Development of Women and Children in Rural Areas, Assistance to Small and Marginal

Farmers for increasing agricultural production, rehabitation of bonded labourers, the National Project on Biogas Development and the National Programme on improved Chullahs and for helping Fishermen, Artisans and similary placed people.

Industrial production is possible only when there is industrial peace. Hereafter, the Department of Labour would play a positive role in ensuring the Employers and Employees work harmoniously. With a large number of educated, skilled and semi-skilled youth unemployed, the Directorate of employment and Training will ensure that employment opportunities are located.

Karnataka is fortunate in having a very good infrastructure for fresh industrial investments specially in "Sunrise" industries. It will be my Government's endeavour to attract new Investments not only in the small scale sector but also in the medium and large scale sectors. The Single Window Agency concept which has been introduced will be further improved and streamlined to ensure that all the required and appropriate clearances are given in the simplest manner and in the quickest possible time.

For Education to be meaningful and for it to result in gainful employment, emphasis will be laid on courses in the new thrust areas like Electronics, Computer Sciences and Environmental Engineering Automobile Technology, Machine Tool Technology, Chemical Engineering and Paper Technology, etc. Greater emphasis will be placed on strengthening the existing Teaching Institution. by proxiding the requered infrastrrctural facilities and designing new coures to meet the present day demands.

Over the past few years some malpractices have entered the Professional Colleges especially in the faculties of Medicine and Engineering. My Government proposes to examine the position in all its ramifications and to initiate appropriate corrective action.

My Government will take a fresh look at the existing Land Reforms Laws with a view to make them more effective and to ensure that land is given to the Tiller and the landless Agricultural Labourer specially Scheduled Castes and Scheduled Tribes.

Members of the Scheduled Castes and Scheduled Tribes will receive the special attention of my Government. Various schemes under the Special Component

Plan and Tribal Sub Plan Would receive a new impetus. Every facility would be made available to ensure that our disadvantaged brethern are able to integrate themselves fully into the social, economic and political life of the community. My Government will be equally concerned with the welfare of the Minorities and Backward Classes.

Women and Children are of special concern to my Government which will strive to take care of their interests in a very special

manner My Government realises the tremendous Potential that the youth of our State possess. In fact it is for the first time that our youth have participated in the recently concluded electoral process. My Government is conscious that the enthusiasm and dynamism of our youth should be channelled into nation building activities.

The Civil Rights Enforcement Cell would hereafter ensure stringent action against affenders and more importantly, play a positive role to ensure that untoward incidents do not take place. Karnataka is known for its communal harmony and peace loving people. People from different parts of the country and of diverse cultures and religions are at home in Karnataka. My Government will ensure that all efforts towards strengthening National Integration, are made.

Creation of irrigation potential is an area on which my Government will lay strong emphasis. Every effort will be made to ensure that all projects in the Krishna basin are completed on schedule. Likewise, in spite of whatever financial constraints that may exist, no effort will be spared to complete all projects in the Cauvery Basin within a definite time frame. As far as the question of the sharing of the Cauvery Waters is concerned, my Government is open to dialogu and discussion with the Government of Tamilnadu. My Government also wishes to make it clear that the Telugu Ganga Scheme has necessarily to be within the framework of the Bachawat Award. Emphasis would also be laid on medium and minor irrigation projects and lift irrigation schemes. The objective would be to ensure an optimum creation and utilisation of all the water resources that rightfully belong to the State.

Karnataka which was a pioneer in Hydro Electric Projects is today suffering from an acute power shortage. This power shortage has affected industrial and agricultural production. Emergent plans involving short term and long term measures are therefore proposed to be taken. In the Power Sector, emphasis will be on completing the On Going Schemes such as Varahi Project, Kalenadi Hydro Electric Project Stage II, Ghataprabha Dam Power House, Raichur Thermal Power Station Units 3 and 4, Gersoppa Hydel Project and renovation and rehabilitation works of the Sharavathi Generation Station. My Government hopes that the Government of India would accord its clearance to the Shivanasamudrum Seasonal Scheme. 18 Projects with a total installed capacity of 3,000 M. W. are proposed to be taken up during the VIII Plan period with external assistance Here again my Government expects the co-operation and assistance of the Government of India. Work on the Kaiga Nuclear Project has commenced. With adequate safeguards having been assured, my Government sees no reason why the work on this Project should be stopped. With the erratic behaviour of the monsoons, it is necessary that an optimum blend of nuclear &

thermal and hydro electric power is evolved. My Government would request the Government of India to make further investments in the Central Pool in respect of Power Projects and promises all such assistance as may be required in the implementation of such projects.

We are on the threshold of the VIII Five Year Plan. In the course of the next few weeks, details of the sectoral approaches to the VIII Plan in terms of the broad objectives to be pursued, the strategy to be odopted and the thrust and priority of the Plan would be worked out. This will be integrated in the proposed "Approach Paper on the State's VIII Five Year Plan". Pending finalisation of the VIII Five Year Plan proposals, an Annual Plan for 1990-91 would be prepared.

My Goverament realises that considerable leakage of revenues from the State's resources has been taking place. My Government proposes to study this problem in depth and to initiate action to prevent such leakages.

My Government will accord primacy to Kannada in administration and education. This is necessary in order to ensure that the administration is responsive to the needs of the people and state craft is carried on in the language understood by the common man. My Gover ment would make a fervent appeal to the Government of India to telecast a greater number of programmes in Kannada on the Dooradarshan.

Hon'ble Members are aware that thereare a number of Projects and Schemes of the State which are pending clearance by the Government of India. Important among these are the Vijayanagar Steel Plant, (some Janata Dal Legislators shouted shame, shame) the Integrated Oil Refinery and Petro Chemicals Complex at Mangalore, development of the Railway System and Thermal Projects. As I have stated earlier, India is a federal country. Irrespeective of political affiliations, we must all work together for the progress of our country. It is in this spirit that my Government expects the Government of India to give Karnataka her due share.

ಘನ್ಯ ಸದಸ್ಯರೆ, ಕರ್ನಾಟಕ ವಿಧಾನ ಮಂಡಲಕ್ಕೆ ಸುಧೀರ್ಘ ಇತಿಹಾಸವಿದೆ. ನೀವು ಸಂಸದೀಯ ಪ್ರಜಾಸತ್ತೆಯ ಅತ್ಯುನ್ನತ ಪರಂಪರೆಯನ್ನು ಕಾಪಾಡಿಕೊಂಡು ಬಂದಿರುವಂಥ ಈ ಸಂಸ್ಥೆಗೆ ಸೇರಿದವರಾಗಿರುವುದು ನಿಸ್ಸಂಶಯವಾಗಿಯೂ ನಿಮಗೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ. ಸಾರ್ವತ್ರಿಕ ಚುನಾವಣೆಗಳು ಈಗಷ್ಟೇ ಮುಗಿದಿದ್ದು, ರಾಜ್ಯದ ಜನತೆ ನಿಮ್ಮಿಂದ ಬಹಳಷ್ಟನ್ನು ನಿರೀಕ್ಷಿಸುತ್ತಿದೆ. ನಮ್ಮ ರಾಜ್ಯದ ಜನತೆಯ ನಿರೀಕ್ಷೆಗಳನ್ನು ಈಡೇರಿಸುವ ದಿಶೆಯಲ್ಲಿ ನಿಮ್ಮ ಚರ್ಚೆಗಳಲ್ಲಿ ನೀವು ಪ್ರಾಮಾಣಿಕವಾಗಿ ಮತ್ತು ಅರ್ಪಣಾ ಮನೋಭಾವದಿಂದ ಪ್ರಯತ್ನಿಸುವಿರೆಂಬ ಅಚಲ ನಂಬಿಕೆ ನನಗಿದೆ.

ನಿಮ್ಮ ಪ್ರಯತ್ನಗಳಿಗೆ ಸಂಪೂರ್ಣ ಯಶಸ್ಸು ದೊರೆಯುವಂದು ಹಾರೈಸುತ್ತೇನೆ.

"ಜೈ ಹಿಂದ್ ಜೈ ಕರ್ನಾಟಕ"

(The joint session concluded at 4-45 p.m.)

(ಮಾನ್ಯ ರಾಜ್ಯಪಾಲರಂ ಮಾಡಿದ ಭಾಷಣದ ಕನ್ನಡ ಭಾಷಾಂತರ)

ಸಭಾಪತಿಗಳೇ, ಸಭಾಧ್ಯಕ್ಷರೇ ಹಾಗೂ ಸನ್ಮಾನ್ಯ ಸದಸ್ಯರೆ.

ರಾಜ್ಯ ವಿಧಾನಮಂಡಲದ ಈ ಜಂಟಿ ಅಧಿವೇಶನಕ್ಕೆ ತಮ್ಮೆಲ್ಲರನ್ನು ಸ್ವಾಗತಿಸಲು ನನಗೆ ತುಂಬಾ ಸಂತೋಷವಾಗುತ್ತಿದೆ ವಿಧಾನ ಮಂಡಲಕ್ಕೆ ಮೊದಲ ಬಾರಿಗೆ ಕಾಲಿಡುತ್ತಿರುವ ಸದಸ್ಯರುಗಳಿಗೆ ವಿಶೇಷ ಸ್ವಾಗತ. ಈಗತಾನೇ ಚುನಾವಣೆ ಮುಗಿದಿದೆ, ಕರ್ನಾಟಕದ ಮಹಾಜನತೆ ನಿಮ್ಮ ಬಗ್ಗೆ ವಿಶ್ವಾಸ, ನಂಬಿಕೆಗಳನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ಸದಸ್ಯರಾದ ತಾವು ಜನತೆ ನಿಮ್ಮಲ್ಲಿರಿಸಿರುವ ವಿಶ್ವಾಸ ಹಾಗೂ ನಂಬಿಕೆಗಳಿಗೆ ಪಾತ್ರವಾಗುವಂತಹ ರೀತಿಯಲ್ಲಿ ನಡೆದುಕೊಳ್ಳುತ್ತೀರಿ ಎಂಬ ನಂಬಿಕೆ ನನಗಿದೆ.

ಕರ್ನಾಟಕದಲ್ಲಿ ಚುನಾವಣೆಯು ಶಾಂತ ಹಾಗೂ ಸಂವ್ಯವಸ್ಥಿತ ರೀತಿಯಲ್ಲಿ ನಡೆದಿದ್ದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ. ಈ ಕೀರ್ತಿ ನಾಡಿನ ಜನತೆಗೆ, ಸ್ಪರ್ಧಿಸಿದ್ದ ಉಮೇದುವಾರರಿಗೆ, ರಾಜಕೀಯ ಪಕ್ಷಗಳಿಗೆ ಹಾಗೂ ಆಡಳಿತ ಕ್ಷೇತ್ರಕ್ಕೆ ಸಲ್ಲಬೇಕು.

ನನ್ನ ಸರ್ಕಾರ ಪ್ರಚಂಡ ಬಹುಮತದಿಂದ ಅಧಿಕಾರಕ್ಕೆ ಬಂದಿದೆ. ಹೊಸದೊಂದು ಸರ್ಕಾರ ಬೇಕೆಂಬ ತಮ್ಮ ಅಭಿಲಾಷೆಯನ್ನು ಕರ್ನಾಟಕದ ಜನತೆ ಸ್ಪಷ್ಟವಾಗಿ ವ್ಯಕ್ತಪಡಿಸಿದ್ದಾರೆ. ಹೊಸ ಭರವಸೆಗಳು ಹಾಗೂ ಆಶೋತ್ತರಗಳು ಅವರ ಮನದಲ್ಲಿವೆ. ಜೊತೆಗೆ ಹೆಚ್ಚಿನ ನಿರೀಕ್ಷೆಯೂ ಇದೆ. ನನ್ನ ಸರ್ಕಾರಕ್ಕೆ ಇದರ ಅರಿವಿದೆ, ಜನತೆಯ ಆಸೆ ಆಕಾಂಕ್ಷೆಗಳನ್ನು ಈಡೇರಿಸಲು ನನ್ನ ಸರ್ಕಾರ ಸರ್ವ ಪ್ರಯತ್ನವನ್ನು ಅತ್ಯಂತ ಪ್ರಾಮಾಣಿಕತೆಯಿಂದ ಮಾಡುತ್ತದೆ. ಜನತೆಯಿಂದ ದೊರೆತ ಈ ಪ್ರಚಂಡ ಬೆಂಬಲ ನನ್ನ ಸರ್ಕಾರದ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸಿದೆ. ವಿರೋಧಪಕ್ಷದ ಗಾತ್ರ ಎಷ್ಟೇ ಸಣ್ಣದಿರಲಿ, ಆರೋಗ್ಯಕರ ಪ್ರಜಾಪ್ರಭುತ್ವಕ್ಕೆ ಒಂದು ರಚನಾತ್ಮಕ ವಿರೋಧಪಕ್ಷ ಬಹಳ ಅತ್ಯಗತ್ಯ. ಆದಕಾರಣ ನನ್ನ ಸರ್ಕಾರವು ವಿರೋಧಪಕ್ಷಕ್ಕೆ ಯುಕ್ತ ಗೌರವಾದರಗಳನ್ನು ಅರ್ಪಿಸುತ್ತದೆ. ಪ್ರತಿಯಾಗಿ ವಿರೋಧಪಕ್ಷವು ರಚನಾತ್ಮಕ ರೀತಿಯಲ್ಲಿ ಕರ್ತವ್ಯ ನಿರ್ವಹಿಸುವುದೆಂದೂ ಹಾಗೂ ಅಗತ್ಯ ಸಹಕಾರ ನೀಡುವುದೆಂದು ನನ್ನ ಸರ್ಕಾರ ಆಶಿಸುತ್ತದೆ.

ನಮ್ಮ ಈ ಒಕ್ಕೂಟ ವ್ಯವಸ್ಥೆಯ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಒಂದು ಬಗೆಯ ಚಿಂತನೆಯ ರಾಜಕೀಯ ಪಕ್ಷವು ರಾಜ್ಯ ಸರ್ಕಾರದಲ್ಲೂ ಇನ್ನೊಂದು ಬಗೆಯ ಚಿಂತನೆಯ ರಾಜಕೀಯ ಪಕ್ಷವು ಕೇಂದ್ರ ಸರ್ಕಾರದಲ್ಲೂ ಅಧಿಕಾರಕ್ಕೆ ಬರುವುದು ಅನಿವಾರ್ಯ. ಇಂದು ನಮ್ಮ ದೇಶದಲ್ಲಿ ಅಂಥ ಪರಿಸ್ಥಿತಿ ಒದಗಿದೆ. ಈ ಸನ್ನಿವೇಶದಲ್ಲಿ, ನಮ್ಮ ಜನತೆಯ ಹಾಗೂ ರಾಷ್ಟ್ರದ ಪ್ರಗತಿಯ ಸತ್ಕಾರ್ಯದಲ್ಲಿ ಭಾರತ ಸರ್ಕಾರಕ್ಕೆ ತನ್ನ ಹೃತ್ಪೂರ್ವಕ ಹಾಗೂ ಪ್ರಾಮಾಣಿಕ ಸಹಕಾರವನ್ನು ನೀಡುವುದಾಗಿ ನನ್ನ ಸರ್ಕಾರ ಸ್ಪಷ್ಟಪಡಿಸುತ್ತದೆ. ರಾಷ್ಟ್ರದ ಏಕತೆ ಮತ್ತು ಸಮಗ್ರತೆ ಹಾಗೂ ಜನತೆಯ ಕಲ್ಯಾಣದ ಪ್ರಶ್ನೆ ಬಂದಾಗ ರಾಜಕೀಯ ಚಿಂತನೆಗಳು ತಮ್ಮ ವಿಚಾರ ಶಕ್ತಿಯ ಮೇಲೆ ಯಾವುದೇ ಪ್ರಭಾವ ಬೀರಲು ನಾವು ಅವಕಾಶ ನೀಡುವುದಿಲ್ಲ. ಆದಕಾರಣ ರಾಷ್ಟ್ರಕ್ಕೆ ಶಾಂತಿ, ಸುಖ, ಸಮೃದ್ಧಿಗಳನ್ನು ತರುವ ಭಾರತ ಸರ್ಕಾರದ ಎಲ್ಲ ಕಾರ್ಯಗಳಿಗೂ ನನ್ನ ಸರ್ಕಾರವು ಪೂರ್ಣ ಸಹಕಾರವನ್ನು ನೀಡುವ ಭರವಸೆ ಕೊಡುತ್ತದೆ. ಭಾರತ ಸರ್ಕಾರವು ಸಹ ಇದೇ ಬಗೆಯ ಭಾವನೆ ಹಾಗೂ ಬದ್ಧತೆಗಳನ್ನು ನಮ್ಮ ಬಗೆಗೂ ತೋರಬೇಕೆಂದು ನನ್ನ ಸರ್ಕಾರವು ನಿರೀಕ್ಷಿಸುತ್ತದೆ.

ಯಾವುದೇ ರಾಜ್ಯದ ಆಡಳಿತವಧಿಯಲ್ಲಿ ನಡೆಯಬಾರದ ಅನೇಕ ಘಟನೆಗಳು ದುರ್ದೈವವಶಾತ್ ನಡೆಯುತ್ತವೆ. ಈ ಸಂದರ್ಭದಲ್ಲಿ ಪ್ರತೀಕಾರಾತ್ಮಕ ನಿಲುವನ್ನು ತಾಳಲು ತಾನು ಬಯಸುವುದಿಲ್ಲ ಎಂಬುದನ್ನು ನನ್ನ ಸರ್ಕಾರ ಸ್ಪಷ್ಟಪಡಿಸಬಯಸುತ್ತದೆ. ಒಂದು ವೇಳೆ ತಪ್ಪೇನಾದರೂ ಆಗಿದ್ದಲ್ಲಿ ಕಾನೂನು ತನ್ನದೇ ಆದ ಸಹಜ ಕ್ರಮವನ್ನು ಕೈಗೊಳ್ಳುತ್ತದೆ. ಇವತ್ತು ಜನತೆ ಸಕಾರಾತ್ಮಕ ದುಡಿಮೆಯನ್ನು ಅಂದರೆ ತಮ್ಮ ಜೀವನ ಮಟ್ಟವನ್ನು ಸುಧಾರಿಸುವ ಗುರಿ ಹೊಂದಿದ ದುಡಿಮೆಯನ್ನು ನಿರೀಕ್ಷಿಸುತ್ತಾರೆ. ನನ್ನ ಸರ್ಕಾರ ಜನತೆಯ ಆಶೋತ್ತರಗಳು ನನಸಾಗುವಂತೆ ಮಾಡು ದಿಸೆಯಲ್ಲಿ ಸಕಾರಾತ್ಮಕ ಹಾಗೂ ರಚನಾತ್ಮಕವಾಗಿ ಕಾರ್ಯನಿರ್ವಹಿಸಲು ತನ್ನೆಲ್ಲ ಶ್ರಮವನ್ನು ವಹಿಸುತ್ತದೆ.

ಮಹಾನ್ ಸ್ವಾತಂತ್ರ್ಯಯೋಧ, ನಿಜವಾದ ಪ್ರಜಾಪ್ರಭುತ್ವವಾದಿ, ಆಧುನಿಕ ಭಾರತದ ಶಿಲ್ಪಿ ಹಾಗೂ ನಮ್ಮ ದೇಶದ ಮೊಟ್ಟಮೊದಲ ಪ್ರಧಾನಿಯವರಾದ ಪಂಡಿತ್ ಜವಾಹರಲಾಲ್ ನೆಹರೂ ಅವರ ಜನ್ಮ ಶತಾಬ್ದಿಯ ಒಂದು ವರ್ಷ ಕಾಲದ ಆಚರಣೆ ಈಗತಾನೆ ಮುಗಿದಿದೆ. ಇದರಿಂದ ಈಗ, ಪಂಡಿತ್‌ಜೀ ಅವರ ಬದುಕು, ತತ್ವ ಹಾಗೂ ನೀತಿಗಳ ಅರಿವು ಯುವಜನತೆಗೆ ಉಂಟಾಗಿದೆ. ನಮ್ಮ ಪಾಲಿಗಂತೂ ಅದು ಪ್ರಜಾಪ್ರಭುತ್ವ, ಸರ್ವಧರ್ಮ ಸಮಭಾವ ಹಾಗೂ ರಾಷ್ಟ್ರ ಸೇವೆಯ ಬಗೆಗಿನ ನಮ್ಮ ನಿಷ್ಠೆಯನ್ನು ನವೀಕರಿಸುವ ಸಂದರ್ಭವೆನ್ನಬಹುದು.

ನಾನು ಈ ಮೊದಲೇಹೇಳಿದಂತೆ. ಅಖಂಡ ಬಹುಮತ ನೀಡಿ ಕರ್ನಾಟಕ ಜನತೆ ನಮ್ಮ ಮೇಲೆ ಗುರುತರ ಜವಾಬ್ದಾರಿಯನ್ನು ಹೊರಿಸಿದೆ. ನನ್ನ ಸರ್ಕಾರವು ವಿಶ್ವಾಸಾರ್ಹವಾದ, ಜನತೆಯ ಭಾವನೆಗಳಿಗೆ ಸ್ಪಂದಿಸುವ ಮತ್ತು ದಕ್ಷ ಆಡಳಿತವನ್ನು ನೀಡುವುದಾಗಿ ಕರ್ನಾಟಕ ಜನತೆಗೆ ನಮ್ಮ ಪಕ್ಷವು ಪ್ರಾಮಾಣಿಕ ವಚನ ನೀಡಿತ್ತದೆ. ಸರ್ಕಾರದ ಕಾರ್ಯನೀತಿ ಮತ್ತು ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವಲ್ಲಿ ಸೌಕರಶಾಹಿ ಪದ್ಧತಿಯು, ಮನ್ನಣೆ ಪಡೆದ ಮತ್ತು ಅಂಗೀಕೃತ ಸಾಧನವಾಗಿದೆ. ಆಡಳಿತವನ್ನು ಚುರುಕುಗೊಳಿಸಲು ಮತ್ತು ಅನಪೇಕ್ಷಿತ ಹಸ್ತಕ್ಷೇಪದಿಂದಾಗಿ ನೈತಿಕ ಬಲ ಕುಂದುವುದನ್ನು ನಿವಾರಿಸಲು ಒಟ್ಟು ಪ್ರಯತ್ನಗಳನ್ನು ಮಾಡಲಾಗುತ್ತದೆ.

ದಿವಂಗತ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರು ಮೊದಲಿಗೆ ಆರಂಭಿಸಿದ ೨೦ ಅಂಶಗಳ ಆರ್ಥಿಕ ಕಾರ್ಯಕ್ರಮವು ನನ್ನ ಸರ್ಕಾರದ ಆರ್ಥಿಕ ಕಾರ್ಯನೀತಿ ಮತ್ತು ಕಾರ್ಯಕ್ರಮಗಳಿಗೆ ಮೂಲಾಧಾರವಾಗಿರುತ್ತದೆ. ಸಾಮಾಜಿಕ ಬದಲಾವಣೆ ತರುವಲ್ಲಿ ಮತ್ತು ಸಾಮಾಜಿಕ ನ್ಯಾಯ ದೊರಕಿಸಿಕೊಡುವಲ್ಲಿ, ೨೦ ಅಂಶಗಳ ಆರ್ಥಿಕ ಕಾರ್ಯಕ್ರಮವನ್ನು ಜಾರಿಗೆ ತರುವುದು ಅತ್ಯವಶ್ಯಕ ಎಂಬುದು ನನ್ನ ಸರ್ಕಾರದ ಪರಿಗಣಿತ ಅಭಿಪ್ರಾಯ. ಈ ದಿಸೆಯಲ್ಲಿ, ಕರ್ನಾಟಕದಲ್ಲಿ ೨೦ ಅಂಶಗಳ ಆರ್ಥಿಕ ಕಾರ್ಯಕ್ರಮವನ್ನು ಪುನರ್ಶೋತನಗೊಳಿಸಿ ಅದನ್ನು ಸೂಕ್ಷ್ಮವಾಗಿ ಗಮನಿಸಲಾಗುವುದು.

ನನ್ನ ಸರ್ಕಾರವು ಪ್ರಜಾಸತ್ತಾತ್ಮಕ ವಿಕೇಂದ್ರೀಕರಣಕ್ಕೆ ಬದ್ಧವಾಗಿದೆ. ಈ ಉದ್ದೇಶಕ್ಕಾಗಿ ರಚಿಸಲಾದಂತಹ ಸಂಸ್ಥೆಗಳನ್ನು ಸೂಕ್ತವಾಗಿ ಪುನಃ ಸಂಘಟಿಸಲಾಗುವುದು ಹಾಗೂ ಅವಶ್ಯವಿರುವಲ್ಲಿ ಅವುಗಳನ್ನು ಬಲಪಡಿಸಲಾಗುವುದು. ಹೀಗೆ ಮಾಡುವುದರಿಂದ ಅವು ಸ್ಥಿರವಾಗುತ್ತವೆ ಮತ್ತು ಜನತೆಯ ಸ್ಥಳೀಯ ಅಶೋತ್ತರಗಳನ್ನು ಹಾಗೂ ಅಗತ್ಯತೆಗಳನ್ನು ಈಡೇರಿಸಲು ಸಮರ್ಥವಾಗುತ್ತವೆ.

ಕರ್ನಾಟಕದಲ್ಲಿ, ಕಳೆದ ಅನೇಕ ವರ್ಷಗಳಿಂದ ಮುನಿಸಿಪಾಲಿಟಿಗಳಿಗೆ ಮತ್ತು ಕಾರ್ಪೋರೇಷನ್‌ಗಳಿಗೆ ಚುನಾವಣೆಗಳನ್ನು ನಡೆಸಲಾಗಿಲ್ಲ. ನಮ್ಮ ಪಟ್ಟಣಗಳು ಮತ್ತು ನಗರಗಳು ಅಭಿವೃದ್ಧಿಯಾಗಬೇಕಾದರೆ, ಅಲ್ಲಿನ ಜನರ ಸಕ್ರಿಯ ಸಹಕಾರ ಮತ್ತು ಬೆಂಬಲದಿಂದ ಮಾತ್ರ ಸಾಧ್ಯ. ನಮ್ಮ ಪಟ್ಟಣ ಮತ್ತು ನಗರಗಳು ಚುನಾಯಿತ ಮಂಡಲಿಗಳ ಆಡಳಿತಕ್ಕೊಳಪಟ್ಟಾಗ ಮಾತ್ರ ಇದು ಸಾಧ್ಯ. ಆದರಿಂದ ನನ್ನ ಸರ್ಕಾರವು, ರಾಜ್ಯದಲ್ಲಿರುವ ಎಲ್ಲಾ ಮುನಿಸಿಪಾಲಿಟಿಗಳಿಗೆ, ಕಾರ್ಪೋರೇಷನ್‌ಗಳಿಗೆ ಆದಷ್ಟು ಬೇಗ ಚುನಾವಣೆ ನಡೆಸುತ್ತದೆ. ಈ ಮಂಡಲಿಗಳಿಗೆ ನಡೆಸಬೇಕಾದ ಚುನಾವಣೆಗಳನ್ನು ಯಾವುದೇ ಕಾರಣಕ್ಕೂ ಮುಂದೂಡಲಾಗುವುದಿಲ್ಲ.

ಕಳೆದ ಕೆಲವು ವರ್ಷಗಳಲ್ಲಿ,ನಮ್ಮ ಹಿಂದಿನ ಪ್ರಧಾನಮಂತ್ರಿಗಳಾದ ಶ್ರೀ ರಾಜೀವ್‌ಗಾಂಧಿಯವರು ಮೂರು ಮುಖ್ಯ ಕಾರ್ಯಕ್ರಮಗಳನ್ನು— ಎಂದರೆ ಜವಾಹರ್ ರೋಜ್‌ಗಾರ್ ಯೋಜನೆ, ನೆಹರೂ ರೋಜ್‌ಗಾರ್ ಯೋಜನೆ, ಇಂದಿರಾ ಆವಾಸ್ ಯೋಜನೆಗಳನ್ನು ಆರಂಭಿಸಿದರು, ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿರುವ ನಮ್ಮ ಜನರ ಜೀವನ ಮಟ್ಟವನ್ನು ಸುಧಾರಿಸುವುದೇ ಈ ಕಾರ್ಯಕ್ರಮಗಳ ಗುರಿ. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿರುವ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುವ ಸುರಿಯನ್ನು ಹೊಂದಿರುವ ಈ ಕಾರ್ಯಕ್ರಮಗಳನ್ನು ಅತ್ಯಂತ ಮಿತವ್ಯಯದಿಂದ ಅನುಷ್ಠಾನಗೊಳಿಸಲು ನನ್ನ ಸರ್ಕಾರವು ಪ್ರಯತ್ನಿಸುತ್ತದೆ. ಈ ಮೂಲಕ, ನಮ್ಮ ಜನರ ಜೀವನ ಮಟ್ಟದಲ್ಲಿ ಮಹತ್ತರ ಸುಧಾರಣೆಯನ್ನು ಸಾಧಿಸಲು ಸಾಧ್ಯವಾಗುತ್ತದೆ. ಈ ಕಾರ್ಯಕ್ರಮಗಳಿಗೆ ಹಣ ಒದಗಿಸುವುದನ್ನು ಭಾರತ ಸರ್ಕಾರವು ಖಂಡಿತವಾಗಿಸುತ್ತದೆಯೆಂದು ನನ್ನ ಸರ್ಕಾರವು ಆಶಿಸುತ್ತದೆ. ಈ ಕಾರ್ಯಕ್ರಮಗಳನ್ನು ಸರ್ಕಾರದ ಉನ್ನತ ಮಟ್ಟದಲ್ಲಿ ಅತ್ಯಂತ ಸೂಕ್ಷ್ಮವಾಗಿ ಗಮನಿಸಲಾಗುವುದು. ಅಗತ್ಯವಿದ್ದೆಡೆಯಲ್ಲಿ ಸುಧಾರಣಾತ್ಮಕ ಕ್ರಮಗಳನ್ನು ಅಳವಡಿಸಲಾಗುವುದು.

ಭಾರತವು ಹಳ್ಳಿಗಳ ದೇಶವಾಗಿದ್ದು, ಹೆಚ್ಚಿನ ಜನರು ವ್ಯವಸಾಯವನ್ನೇ ಅವಲಂಭಿಸಿರುತ್ತಾರೆ ಕರ್ನಾಟಕವೂ ಇದಕ್ಕೆ ಹೊರತಲ್ಲ. ನಮ್ಮ ರಾಜ್ಯವು ಮತ್ತಷ್ಟು ಏಳಿಗೆ ಹೊಂದಬೇಕಾದರೆ, ಅವು ಗ್ರಾಮೀಣ ಮಟ್ಟದಲ್ಲೇ ಪ್ರಾರಂಭವಾಗಬೇಕು. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು, ನನ್ನ ಸರ್ಕಾರವು ಕೃಷಿ ವಲಯಕ್ಕೆ ವಿಶೇಷ ಆದ್ಯತೆ ನೀಡುತ್ತದೆ. ತಾಂತ್ರಿಕ ಮಾರ್ಗದರ್ಶನ, ಬಿತ್ತನೆ ಬೀಜಗಳು, ಗೊಬ್ಬರಗಳು ಮತ್ತು ಕೀಟನಾಶಕಗಳನ್ನು ಒದಗಿಸುವ ಮೂಲಕ ರೈತರಿಗೆ ಬೇಕಾದ ಎಲ್ಲಾ ಅಗತ್ಯ ಪರಿಕರಗಳನ್ನು ನೀಡಲಾಗುವುದು.

ಕರ್ನಾಟಕದಲ್ಲಿ ಬಹಳಷ್ಟು ಕೃಷಿ ಕಾರ್ಯಾಚರಣೆಗಳು ಖುಷ್ಕಿ ಜಮೀನಿನಲ್ಲೇ ನಡೆಯುತ್ತವೆ. ಆದುದರಿಂದ, ನನ್ನ ಸರ್ಕಾರವು ಜಲವಿಭಾಜಕ ಪ್ರದೇಶ ಅಭಿವೃದ್ಧಿ ಯೋಜನೆಗಳ ಮೂಲಕ ಖುಷ್ಕಿ

ಜವಿಾನಿನ ಬೇಸಾಯಕ್ಕೆ ವಿಶೇಷ ಒತ್ತು ನೀಡುತ್ತದೆ. ರಾಷ್ಟ್ರೀಯ ಎಣ್ಣೆ ಬೀಜಗಳು ಮತ್ತು ಎಣ್ಣೆ ಬೀಜಗಳ ಉತ್ಪಾದನಾವೃದ್ಧಿ ಕಾರ್ಯಕ್ರಮಗಳು ಮತ್ತು ರಾಷ್ಟ್ರೀಯ ದ್ವಿದಳ ಧಾನ್ಯಗಳ ಅಭಿವೃದ್ಧಿ ಯೋಜನೆಗಳಿಗೂ ಸಹ ಒತ್ತು ನೀಡಲಾಗುವುದು.

ಕರ್ನಾಟಕದಲ್ಲಿ ತೋಟಗಾರಿಕೆಗೆ ಉತ್ತಮ ಅವಕಾಶ ಇದೆ. ಆದುದರಿಂದ ಕೆಲವು ತೋಟಗಾರಿಕೆ ಬೆಳೆಗಳ ಸಮಗ್ರ ಉತ್ಪಾದನೆ ಮತ್ತು ಕ್ರಯವಿಕ್ರಯ ಕಾರ್ಯಕ್ರಮವನ್ನು ಕಾರ್ಯರೂಪಕ್ಕೆ ತರಲು, ಲಭ್ಯವಾಗಬಹುದಾದಂಥ ವಿದೇಶಿ ನೆರವನ್ನು ಪಡೆಯಲು ನನ್ನ ಸರ್ಕಾರ ಯೋಚಿಸುತ್ತಿದೆ. ಅದೇ ರೀತಿಯಲ್ಲಿ, ರಾಜ್ಯದಲ್ಲಿ ತೆಂಗಿನ ತೋಟಗಳ ಸರ್ವಾಂಗೀಣ ಅಭಿವೃದ್ಧಿಯನ್ನು ಮಾಡುವಂಥ ತೆಂಗು ಅಭಿವೃದ್ಧಿ ಯೋಜನೆಗೂ ನನ್ನ ಸರ್ಕಾರ ವಿದೇಶಿ ನೆರವನ್ನು ಪಡೆಯಲು ಉದ್ದೇಶಿಸಿದೆ.

ಅವಶ್ಯಕ ಸರಕುಗಳು ಮತ್ತು ಖಾದ್ಯ ತೈಲಗಳ ಬೆಲೆಗಳ ಏರಿಕೆಯು ನನ್ನ ಸರ್ಕಾರಕ್ಕೆ ತೀವ್ರ ಆತಂಕವನ್ನುಂಟು ಮಾಡಿದೆ. ರಾಜ್ಯವು, ಕೇಂದ್ರ ಸಂಗ್ರಹದಿಂದ ಆಗುವ ಹಂಚಿಕೆಗಾಗಿ ಭಾರತ ಸರ್ಕಾರವನ್ನು ಅವಲಂಬಿಸಬೇಕಾಗಿದೆ. ಕೇಂದ್ರ ಸಂಗ್ರಹದಿಂದ ಕರ್ನಾಟಕಕ್ಕೆ ಅವಶ್ಯಕ ಸರಕುಗಳ ಮತ್ತು ಖಾದ್ಯ ತೈಲಗಳ ಹಂಚಿಕೆಯ ಪಾಲನ್ನು ಗಣನೀಯವಾಗಿ ಹೆಚ್ಚಿಸಿಕೊಳ್ಳಲು ನನ್ನ ಸರ್ಕಾರ ಮೊದಲ ಆದ್ಯತೆ ನೀಡುತ್ತದೆ. ಜನತೆಯಲ್ಲಿಯೇ, ಹೆಚ್ಚು ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಮತ್ತು ಹೆಚ್ಚು ಜನಸಂಖ್ಯೆಯುಳ್ಳ ಪ್ರದೇಶಗಳನ್ನು ಸಾರ್ವಜನಿಕ ವಿತರಣಾ ಪದ್ಧತಿಯ ವ್ಯಾಪ್ತಿಗೆ ಒಳಪಡಿಸಲು ನನ್ನ ಸರ್ಕಾರವು ಪ್ರಯತ್ನಿಸುತ್ತದೆ. ಇವುಗಳನ್ನು ಪುನರ್‌ವ್ಯವಸ್ಥೆಗೊಳಿಸಲಾಗುವುದು. ಆ ಮೂಲಕ ನಮ್ಮ ಸಮಾಜದ ದುರ್ಬಲ ವರ್ಗಗಳ ಹಿತರಕ್ಷಣೆ ಮಾಡಲಾಗುವುದು. ಇದರಿಂದ ಕನಿಷ್ಟಪಕ್ಷ ಆಹಾರಕ್ಕೆ ಸಂಬಂಧಿಸಿದ ಮೂಲಭೂತ ಅಗತ್ಯಗಳನ್ನು ಪೂರೈಸಿದಂತಾಗುತ್ತದೆ. ಆಹಾರವೇ ಅಲ್ಲದೆ, ನಮ್ಮ ಜನತೆಗೆ ವಸತಿಯು ಅಗತ್ಯ ಇದೆ. ಆದುದರಿಂದ, ನಿವೇಶನ ರಹಿತರಿಗೆ ನಿವೇಶನಗಳು ಮತ್ತು ಮನೆಯಿಲ್ಲದವರಿಗೆ ಮನೆಯನ್ನು ಒದಗಿಸುವ ಬಗ್ಗೆ ನನ್ನ ಸರ್ಕಾರವು ಒತ್ತು ನೀಡುತ್ತದೆ. ಈ ಎರಡು ಕ್ಷೇತ್ರಗಳಲ್ಲಿ ಕಾಲಮಿತಿ ಕಾರ್ಯಕ್ರಮಗಳನ್ನು ರೂಪಿಸಲಾಗುವುದು ಮತ್ತು ಅವುಗಳನ್ನು ಪರಿಣಾಮಕಾರಿಯಾಗಿ ಸಕಾಲದಲ್ಲಿ ಕಾರ್ಯರೂಪಕ್ಕೆ ತರುವ ಬಗ್ಗೆ ವಿಶೇಷ ಗಮನ ನೀಡಲಾಗುವುದು. ಗ್ರಾಮೀಣ ನೀರು ಪೂರೈಕೆ ಕಾರ್ಯಕ್ರಮದ ಮೇರೆಗೆ ರಾಜ್ಯದಲ್ಲಿನ ಎಲ್ಲ ವಸತಿಗಳಿಗೆ ಸುರಕ್ಷಿತವಾದ ಕುಡಿಯುವ ನೀರನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸಲಾಗುವುದು. ಈ ಕಾರ್ಯಕ್ರಮದಲ್ಲಿ ಹೊಸ ವಸತಿಗಳನ್ನು ಒಳಪಡಿಸುವುದರ ಜೊತೆಗೆ, ಸಾಧಿಸಿದ ಪ್ರಯೋಜನಗಳನ್ನು ವೃದ್ಧಿಪಡಿಸಲಾಗುವುದು. ಅಂದರೆ, ಸಾಕಷ್ಟು ಪ್ರಮಾಣದ ನೀರು ಪೂರೈಕೆಗೆ ಒತ್ತು ನೀಡಲಾಗುವುದು.

ನನ್ನ ಸರ್ಕಾರವು, ಬರಪೀಡಿತ ಪ್ರದೇಶ ಕಾರ್ಯಕ್ರಮ, ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ, ಗ್ರಾಮೀಣ ಪ್ರದೇಶಗಳಲ್ಲಿನ ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿಯಂತಹ ವಿಶೇಷ ಆರ್ಥಿಕ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತು ನೀಡುತ್ತದೆ. ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದಕ್ಕಾಗಿ, ಸಣ್ಣ ಮತ್ತು ಅತಿ ಸಣ್ಣ ರೈತರಿಗೆ, ಜೀತ ವಿಮುಕ್ತ ಕಾರ್ಮಿಕರ ಪುನರ್ ವ್ಯವಸ್ಥೆಗೆ,

ಜೈವಿಕ ಅನಿಲದ ಅಭಿವೃದ್ಧಿಗೆ ಸಂಬಂಧಿಸಿದ ರಾಷ್ಟ್ರೀಯ ಯೋಜನೆಗೆ ಮತ್ತು ಸುಧಾರಿತ ಒಲೆಗಳಿಗೆ ಸಂಬಂಧಿಸಿದ ರಾಷ್ಟ್ರೀಯ ಕಾರ್ಯಕ್ರಮಕ್ಕೆ ಹಾಗೂ ವಿಮಾನುಗಾರರು, ಕುಶಲ ಕರ್ಮಿಗಳು ಮತ್ತು ಅದೇ ರೀತಿಯ ಜನರಿಗೆ ನೆರವು ನೀಡಲಾಗುವುದು.

ಔದ್ಯಮಿಕ ವಲಯದಲ್ಲಿ ಶಾಂತಿ ಇದ್ದರೆ ಮಾತ್ರ ಔದ್ಯಮಿಕ ಉತ್ಪಾದನೆ ಸಾಧ್ಯ. ಇನ್ನು ಮುಂದೆ, ಕಾರ್ಮಿಕ ಇಲಾಖೆಯು ಮಾಲೀಕರು ಮತ್ತು ನೌಕರರ ಕೆಲಸವು ಸೌಹಾರ್ದಯುತವಾಗಿ ನಡೆಯುವಂತೆ ಮಾಡುವಲ್ಲಿ ಸಕಾರಾತ್ಮಕ ಪಾತ್ರವನ್ನು ವಹಿಸುತ್ತದೆ. ವಿದ್ಯಾವಂತ, ಕುಶಲ, ಹಾಗೂ ಅರೆ ಕುಶಲರಾದ ಬಹಳಷ್ಟು ನಿರುದ್ಯೋಗಿ ಯುವಜನರಿಗೆ ಉದ್ಯೋಗಾವಕಾಶಗಳು ದೊರಕುವಂತೆ ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯವು ನೋಡಿಕೊಳ್ಳುತ್ತದೆ.

ಹೊಸ ಔದ್ಯಮಿಕ ಹಣ ಹೂಡಿಕೆಗೆ ಸಂಬಂಧಿಸಿದಂತೆ, ಅದರಲ್ಲೂ ವಿಶೇಷವಾಗಿ "ಸನ್‌ರೈಸ್" ಉದ್ಯಮಗಳಿಗೆ ಬೇಕಾದ ಉತ್ತಮ ರೀತಿಯ ಅತ್ಯಗತ್ಯ ಸೌಲಭ್ಯಗಳನ್ನು ಹೊಂದಿರುವುದು ಕರ್ನಾಟಕದ ಭಾಗ್ಯ. ಸಣ್ಣ ಪ್ರಮಾಣದ ವಲಯಗಳಲ್ಲಿ ಮಾತ್ರವಲ್ಲದೆ ಮಧ್ಯಮ ಮತ್ತು ಬೃಹತ್ ಪ್ರಮಾಣದ ವಲಯಗಳಲ್ಲೂ ಸಹ ಹೊಸದಾಗಿ ಹಣ ಹೂಡಿಕೆಗಳನ್ನು ಆಕರ್ಷಿಸುವ ನಿಟ್ಟಿನಲ್ಲಿ, ನನ್ನ ಸರ್ಕಾರ ಪ್ರಯತ್ನ ಮಾಡುತ್ತದೆ. ಅಗತ್ಯವಾದ ಮತ್ತು ಸೂಕ್ತವಾದ ಎಲ್ಲ ಅನುಮತಿಗಳನ್ನು ಸರಳ ರೀತಿಯಲ್ಲಿ ಮತ್ತು ಸಾಧ್ಯವಾದಷ್ಟು ಬೇಗನೆ ನೀಡಲು ಇತ್ತೀಚೆಗೆ ಆರಂಭಿಸಲಾದ "ಸಿಂಗಲ್ ವಿಂಡೋ ಏಜೆನ್ಸಿ" ಪದ್ಧತಿಯನ್ನು ಮತ್ತಷ್ಟು ಸುಧಾರಿಸಲಾಗುವುದು ಮತ್ತು ವಿಕೇಂದ್ರೀಕರಿಸಲಾಗುವುದು.

ಶಿಕ್ಷಣವು ಅರ್ಥಪೂರ್ಣವಾಗಿ, ಲಾಭದಾಯಕ ಉದ್ಯೋಗಾವಕಾಶ ಕಲ್ಪಿಸುವಂತೆ ಮಾಡಲು ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ ವಿಜ್ಞಾನ ಮತ್ತು ಪರಿಸರ ಇಂಜಿನಿಯರಿಂಗ್, ಆಟೋಮೊಬೈಲ್ ಟೆಕ್ನಾಲಜಿ, ಮೆಷಿನ್ ಟೂಲ್ ಟೆಕ್ನಾಲಜಿ, ಕೆಮಿಕಲ್ ಇಂಜಿನಿಯರಿಂಗ್ ಮತ್ತು ಪೇಪರ್ ಟೆಕ್ನಾಲಜಿ ಇತ್ಯಾದಿಗಳಂತಹ ಹೊಸ ಒಲವಿನ ಕ್ಷೇತ್ರಗಳಿಗೆ ಪ್ರಾಮುಖ್ಯತೆ ಕೊಡಲಾಗುವುದು. ಪ್ರಸಕ್ತ ಬೇಡಿಕೆಗಳನ್ನು ಈಡೇರಿಸುವ ಸಲುವಾಗಿ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಮತ್ತು ಹೊಸ ವ್ಯಾಸಂಗ ಕ್ರಮಗಳನ್ನು ರೂಪಿಸುವ ಮೂಲಕ ಈಗಿರುವ ಶಿಕ್ಷಣ ಸಂಸ್ಥೆಗಳನ್ನು ಬಲಪಡಿಸುವುದಕ್ಕೆ ಒತ್ತು ನೀಡಲಾಗುವುದು.

ಕಳೆದ ಕೆಲವು ವರ್ಷಗಳಲ್ಲಿ, ವೃತ್ತಿ ಶಿಕ್ಷಣ ಕಾಲೇಜುಗಳಲ್ಲಿ, ವಿಶೇಷವಾಗಿ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ವ್ಯಾಸಂಗ ವಿಭಾಗಗಳಲ್ಲಿ ಸ್ವಲ್ಪಮಟ್ಟಿನ ಅವ್ಯವಹಾರಗಳು ನಡೆದಿವೆ. ಎಲ್ಲೆಲ್ಲಿ ಎಷ್ಟೆಷ್ಟು ಅವ್ಯವಹಾರ ನಡೆದಿದೆ ಎಂಬುದನ್ನು ಪೂರ್ಣವಾಗಿ ಪರಿಶೀಲಿಸಲು ಮತ್ತು ಸೂಕ್ತ ಸುಧಾರಣಾ ಕ್ರಮವನ್ನು ಕೈಗೊಳ್ಳಲು ನನ್ನ ಸರ್ಕಾರ ಉದ್ದೇಶಿಸಿದೆ.

ನನ್ನ ಸರ್ಕಾರವು, ಉಳುವವರಿಗೆ ಮತ್ತು ಭೂರಹಿತ ಕೃಷಿ ಕಾರ್ಮಿಕರಿಗೆ, ಅದರಲ್ಲೂ ವಿಶೇಷವಾಗಿ ಪರಿಶಿಷ್ಟ ಜಾತಿಯವರಿಗೆ ಮತ್ತು ಪರಿಶಿಷ್ಟ ಪಂಗಡದವರಿಗೆ ಜಮೀನು ದೊರಕುವುದನ್ನು ಖಾತರಿಪಡಿಸಿಕೊಳ್ಳುವ ಸಲುವಾಗಿ, ಈಗಿರುವ ಭೂ ಸುಧಾರಣಾ ಕಾನೂನುಗಳನ್ನು ಹೆಚ್ಚು ಪರಿಣಾಮಕಾರಿಯಾಗಿಸಲು ಪ್ರಯತ್ನಿಸುತ್ತದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಬಗ್ಗೆ ನನ್ನ ಸರ್ಕಾರ ವಿಶೇಷ ಗಮನವನ್ನು ನೀಡುತ್ತದೆ. ವಿಶೇಷ ಘಟಕ ಯೋಜನೆಯ ಮತ್ತು ಬುಡಕಟ್ಟು ಜನರ ಉಪ ಯೋಜನೆಯ ಅಡಿಯಲ್ಲಿನ ವಿವಿಧ ಕಾರ್ಯಕ್ರಮಗಳಿಗೆ ಹೊಸ ಚಾಲನೆ ನೀಡಲಾಗುವುದು. ಸೌಲಭ್ಯಗಳಿಂದ ವಂಚಿತರಾಗಿರುವ ನಮ್ಮ ಸಹೋದರರು ಸಮುದಾಯದ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಜೀವನದಲ್ಲಿ ಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಳ್ಳಲು ಸಾಧ್ಯವಾಗುವಂತೆ ಮಾಡುವ ಸಲುವಾಗಿ ಎಲ್ಲ ಸೌಲಭ್ಯಗಳನ್ನು ಒದಗಿಸಲಾಗುವುದು. ಅಲ್ಪಸಂಖ್ಯಾತರ ಮತ್ತು ಹಿಂದುಳಿದ ವರ್ಗಗಳ ಶ್ರೇಯೋಭಿವೃದ್ಧಿ ಬಗ್ಗೆಯೂ ನನ್ನ ಸರ್ಕಾರಕ್ಕೆ ಅಷ್ಟೇ ಕಾಳಜಿ ಇದೆ.

ನನ್ನ ಸರ್ಕಾರವು ಮಹಿಳೆಯರು ಮತ್ತು ಮಕ್ಕಳ ಬಗ್ಗೆ ವಿಶೇಷವಾದ ಕಳಕಳಿಯನ್ನು ಹೊಂದಿದ್ದು, ವಿಶೇಷ ರೀತಿಯಲ್ಲಿ ಅವರ ಹಿತಾಸಕ್ತಿಗಳನ್ನು ರಕ್ಷಿಸಲು ಪ್ರಯತ್ನಿಸಿದೆ. ನಮ್ಮ ರಾಜ್ಯದ ಯುವ ಜನರ ಮಹತ್ತರ ಸಾಮರ್ಥ್ಯದ ಅರಿವು ನನ್ನ ಸರ್ಕಾರಕ್ಕಿದೆ ವಾಸ್ತವವಾಗಿ, ನಮ್ಮ ಯುವಜನರು ಇತ್ತೀಚಿನ ಚುನಾವಣೆಯಲ್ಲಿ ಮೊದಲ ಬಾರಿಗೆ ಪಾಲುಗೊಂಡಿದ್ದಾರೆ. ನಮ್ಮ ಯುವಜನರ ಉತ್ಸಾಹ ಮತ್ತು ಕ್ರಿಯಾಶೀಲತೆಯನ್ನು ರಾಷ್ಟ್ರ ನಿರ್ಮಾಣದ ಕಾರ್ಯಚಟುವಟಿಕೆಗಳತ್ತ ಹರಿಸಬೇಕೆಂಬ ಪ್ರಜ್ಞೆ ನನ್ನ ಸರ್ಕಾರಕ್ಕೆ ಇದೆ.

ನಾಗರಿಕ ಹಕ್ಕುಗಳ ಜಾರಿ ವಿಭಾಗವು ಇನ್ನು ಮುಂದೆ ತಪ್ಪಿತಸ್ಥರ ಮೇಲೆ ಉಗ್ರ ಕ್ರಮ ಕೈಗೊಳ್ಳುತ್ತದೆ ಹಾಗೂ ಮುಖ್ಯವಾಗಿ ಅಹಿತಕರ ಘಟನೆಗಳು ನಡೆಯದಂತೆ ನೋಡಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಕರ್ನಾಟಕವು, ಮತೀಯ ಸಾಮರಸ್ಯದ ಮತ್ತು ಶಾಂತಿಪ್ರಿಯ ಜನರ ನಾಡು ಎಂದು ಪ್ರಸಿದ್ಧವಾಗಿದೆ. ದೇಶದ ವಿವಿಧ ಭಾಗಗಳ ಮತ್ತು ವಿಭಿನ್ನ ಸಂಸ್ಕೃತಿ ಮತ್ತು ಧರ್ಮಗಳ ಜನರು ಕರ್ನಾಟಕದಲ್ಲಿ ವಾಸಿಸುತ್ತಿದ್ದಾರೆ. ನನ್ನ ಸರ್ಕಾರವು, ರಾಷ್ಟ್ರೀಯ ಭಾವೈಕ್ಯತೆಯನ್ನು ಬಲಪಡಿಸಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತದೆ.

ನೀರಾವರಿ ಸಾಮರ್ಥ್ಯವನ್ನು ಸೃಜಿಸುವ ವಿಚಾರಕ್ಕೆ ನನ್ನ ಸರ್ಕಾರವು ಹೆಚ್ಚಿನ ಒತ್ತು ನೀಡುತ್ತದೆ. ಕೃಷ್ಣಾ ಜಲಾನಯನ ಪ್ರದೇಶದಲ್ಲಿನ ಎಲ್ಲಾ ಯೋಜನೆಗಳು ನಿಗದಿತ ಅವಧಿಯೊಳಗೆ ಪೂರ್ಣಗೊಳ್ಳುವಂತೆ ಮಾಡಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತದೆ. ಹಾಗೆಯೇ, ಆರ್ಥಿಕ ನಿರ್ಬಂಧವೆಷ್ಟೇ ಇದ್ದರೂ, ನಿರ್ದಿಷ್ಟ ಕಾಲಮಿತಿಯೊಳಗೆ ಕಾವೇರಿ ಜಲಾನಯನ ಪ್ರದೇಶದಲ್ಲಿನ ಎಲ್ಲಾ ಯೋಜನೆಗಳನ್ನು ಪೂರ್ಣಗೊಳಿಸಲು ಸರ್ವ ಪ್ರಯತ್ನ ಮಾಡಲಾಗುತ್ತದೆ. ಕಾವೇರಿ ನೀರಿನ ಹಂಚಿಕೆಯ ಪ್ರಶ್ನೆಗೆ ಸಂಬಂಧಿಸಿದಂತೆ, ನನ್ನ ಸರ್ಕಾರವು ತಮಿಳುನಾಡು ಸರ್ಕಾರದೊಂದಿಗೆ ಮುಕ್ತ ಮಾತುಕತೆ ಮತ್ತು ಚರ್ಚೆಗೆ ಸಿದ್ಧವಿದೆ. ತೆಲುಗು-ಗಂಗಾ ಯೋಜನೆಯು ಅವಶ್ಯಕವಾಗಿ ಬಚಾವತ್ ಶಿರ್ಪಿನ ಚೌಕಟ್ಟಿನೊಳಗೆ ಇರಬೇಕೆಂಬುದನ್ನು ಸ್ಪಷ್ಟಪಡಿಸಲು ನನ್ನ ಸರ್ಕಾರ ಇಚ್ಛಿಸುತ್ತದೆ. ಮಧ್ಯಮ ಮತ್ತು ಸಣ್ಣ ನೀರಾವರಿ ಯೋಜನೆಗಳು ಹಾಗೂ ಎತ್ತು ನೀರಾವರಿ ಯೋಜನೆಗಳಿಗೆ ಸಹ ಪ್ರಾಮುಖ್ಯತೆ ನೀಡಲಾಗುವುದು. ರಾಜ್ಯಕ್ಕೆ ನ್ಯಾಯ ಸಮ್ಮತವಾಗಿ ದೊರಕಬೇಕಾದ ಎಲ್ಲಾ ಜಲಸಂಪನ್ಮೂಲಗಳನ್ನು ಗರಿಷ್ಠ ಪ್ರಮಾಣದಲ್ಲಿ ಸೃಜಿಸಿ ಬಳಸಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳುವುದು ನಮ್ಮ ಉದ್ದೇಶ.

ಜಲವಿದ್ಯುತ್ ಯೋಜನೆಗಳಲ್ಲಿ ಮಂಚೂಣಿಯಲ್ಲಿದ್ದ ಕರ್ನಾಟಕವು ಇಂದು ತೀವ್ರ ವಿದ್ಯುತ್ ಕೊರತೆಯ ಸಮಸ್ಯೆಯನ್ನು ಎದುರಿಸುತ್ತಿದೆ. ಈ ವಿದ್ಯುತ್ ಕೊರತೆಯಿಂದ ಕೈಗಾರಿಕೆ ಮತ್ತು ಕೃಷಿ ಉತ್ಪಾದನೆಗೆ ಧಕ್ಕೆ ಉಂಟಾಗಿದೆ. ಆದುದರಿಂದ, ಅಲ್ಪಾವಧಿ ಹಾಗೂ ದೀರ್ಘಾವಧಿ ಕ್ರಮಗಳನ್ನೊಳಗೊಂಡ ತುರ್ತು ಯೋಜನೆಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ವಿದ್ಯುತ್ ವಲಯದಲ್ಲಿ, ವರಾಹಿ ಯೋಜನೆ, ಕಾಳಿ ನದಿ ಜಲವಿದ್ಯುತ್ ಯೋಜನೆ IIನೇ ಹಂತ, ಘಟಪ್ರಭಾ ಆಣೆಕಟ್ಟು ವಿದ್ಯುತ್‌ಕೇಂದ್ರ, ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ ಘಟಕಗಳು ೩ ಮತ್ತು ೪ ಗೇರುಸೊಪ್ಪ ಜಲ ವಿದ್ಯುತ್ ಯೋಜನೆ ಮುಂತಾದ ಈಗ ಪ್ರಗತಿಯಲ್ಲಿರುವ ಯೋಜನೆಗಳನ್ನು ಪೂರ್ಣಗೊಳಿಸುವುದಕ್ಕೆ ಹಾಗೂ ಶರಾವತಿ ವಿದ್ಯುತ್ ಉತ್ಪಾದನಾ ಕೇಂದ್ರದ ಜೀರ್ಣೋದ್ಧಾರ ಹಾಗೂ ಪುನಶ್ಚೈತನ್ಯೀಕರಣಕ್ಕೆ ಪ್ರಾಧಾನ್ಯತೆ ನೀಡಲಾಗುತ್ತದೆ. ಶಿವನಸಮುದ್ರ ಋತುಕಾಲಿಕ ಯೋಜನೆಗೆ ಭಾರತ ಸರ್ಕಾರವು ತನ್ನ ಅನುಮತಿ ನೀಡುವುದೆಂಬ ಭರವಸೆ ನನ್ನ ಸರ್ಕಾರಕ್ಕಿದೆ. ವಿದೇಶಿ ನೆರವಿನೊಂದಿಗೆ ಒಟ್ಟು ೩೦೦ ಮೆಗಾವಾಟ್ ಸ್ಥಾಪಿತ ಸಾಮರ್ಥ್ಯದ ೧೮ ಯೋಜನೆಗಳನ್ನು VIIIನೇ ಯೋಜನಾವಧಿಯಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆಯೂ, ನನ್ನ ಸರ್ಕಾರವು ಭಾರತ ಸರ್ಕಾರದ ಸಹಕಾರ ಹಾಗೂ ಸಹಾಯವನ್ನು ನಿರೀಕ್ಷಿಸುತ್ತದೆ. ಕೈಗಾ ಅಣು ಸ್ಥಾವರ ಯೋಜನೆಯ ಕಾರ್ಯ ಪ್ರಾರಂಭವಾಗಿದೆ. ಸಾಕಷ್ಟು ಸುರಕ್ಷಾ ವ್ಯವಸ್ಥೆಯ ಆಶ್ವಾಸನೆಯನ್ನು ನೀಡಿದಾಗ್ಯೂ ಈ ಯೋಜನೆಯ ಕಾರ್ಯವನ್ನು ಯಾವ ಕಾರಣಕ್ಕಾಗಿ ನಿಲ್ಲಿಸಬೇಕೆಂಬುದು ನನ್ನ ಸರ್ಕಾರಕ್ಕೆ ತಿಳಿಯುತ್ತಿಲ್ಲ. ಅನಿರ್ದಿಷ್ಟ ವಿಳಂಬಗಾಲದ ಕಾರಣದಿಂದಾಗಿ, ಅಣು ವಿದ್ಯುತ್, ಶಾಖೋತ್ಪನ್ನ ವಿದ್ಯುತ್ ಹಾಗೂ ಜಲ ವಿದ್ಯುತ್ ಯೋಜನೆಗಳ ಗರಿಷ್ಠ ಪ್ರಮಾಣದ ಸಂಯೋಜನೆಯನ್ನು ರೂಪಿಸುವುದು ಅತ್ಯವಶ್ಯ. ವಿದ್ಯುತ್ ಯೋಜನೆಗಳಿಗೆ ಸಂಬಂಧಿಸಿದಂತೆ, ಕೇಂದ್ರದ ಪಾಲನ್ನು ಮತ್ತಷ್ಟು ಹೆಚ್ಚಿಸಬೇಕೆಂದು ಭಾರತ ಸರ್ಕಾರವನ್ನು ನನ್ನ ಸರ್ಕಾರ ಕೋರುತ್ತದೆ ಹಾಗೂ ಅಂಥ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ಅವಶ್ಯವಿರುವಂಥ ಎಲ್ಲಾ ನೆರವನ್ನು ನೀಡುವ ಭರವಸೆ ಕೊಡುತ್ತದೆ.

ನಾವೀಗ, VI7Iನೇ ಪಂಚವಾರ್ಷಿಕ ಯೋಜನೆಯ ಹೊಸ್ತಿಲಲ್ಲಿದ್ದೇವೆ. ಅನುಸರಿಸಬೇಕಾದ ಸ್ಥೂಲ ಧ್ಯೇಯೋದ್ದೇಶಗಳ, ಅಳವಡಿಸಿಕೊಳ್ಳಬೇಕಾದ ಕಾರ್ಯತಂತ್ರಗಳು, ಯೋಜನೆಯ ವಿವಿಧ ಕಾರ್ಯಕ್ರಮಗಳ ಅನುಷ್ಠಾನ ನೀಡಬೇಕಾದ ಪ್ರಾಧಾನ್ಯತೆ ಹಾಗೂ ಆದ್ಯತೆ, ಇವುಗಳಿಗೆ ಸಂಬಂಧಿಸಿದಂತೆ VIIIನೇ ಯೋಜನೆಯ ವಲಯವಾರು ಪ್ರಸ್ತಾವಗಳ ವಿವರಗಳನ್ನು ಮುಂದಿನ ಕೆಲವು ವಾರಗಳಲ್ಲಿ ಸಿದ್ಧಪಡಿಸಲಾಗುವುದು. ಇವುಗಳನ್ನು ಪ್ರಸ್ತಾವಿತ "ರಾಜ್ಯದ VIIIನೇ ಪಂಚವಾರ್ಷಿಕ ಯೋಜನೆಯ ಬಗೆಗಿನ ಪ್ರಸ್ತಾವನಾ ಪತ್ರ"ದಲ್ಲಿ ಸೇರಿಸಲಾಗುವುದು. VIIIನೇ ಪಂಚವಾರ್ಷಿಕ ಯೋಜನೆಯ ಪ್ರಸ್ತಾವಗಳನ್ನು ಅಂತಿಮಗೊಳಿಸಲಾಗುತ್ತಿದ್ದು, ತನ್ಮಧ್ಯೆ ೧೯೯೦-೯೧ನೇ ವರ್ಷಕ್ಕಾಗಿ ವಾರ್ಷಿಕ ಯೋಜನೆಯೊಂದನ್ನು ಸಿದ್ಧಪಡಿಸಲಾಗುವುದು.

ರಾಜ್ಯದ ಸಂಪನ್ಮೂಲಗಳಿಂದ ರಾಜಸ್ವವು ಗಣನೀಯ ಪ್ರಮಾಣದಲ್ಲಿ ಸೋರಿ ಹೋಗುತ್ತಿರುವುದರ ನನ್ನ ಸರ್ಕಾರಕ್ಕೆ ತಿಳಿದಿದೆ. ನನ್ನ ಸರ್ಕಾರವು, ಈ ಸಮಸ್ಯೆಯ ಬಗ್ಗೆ ಕೂಲಂಕುಷ ಅಧ್ಯಯನ ನಡೆಸಿ, ಆದಾಯ ಸೋರಿ ಹೋಗುವುದನ್ನು ತಡೆಗಟ್ಟುವ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿದೆ.

ನನ್ನ ಸರ್ಕಾರವು ಆಡಳಿತ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಕನ್ನಡಕ್ಕೆ ಪ್ರಾಮುಖ್ಯತೆ ನೀಡುತ್ತದೆ. ಆಡಳಿತವು ಜನತೆಯ ಆಗತ್ಯತೆಗಳಿಗೆ ಸ್ಪಂದಿಸುವಂತೆ ಮಾಡಲು ಮತ್ತು ರಾಜ್ಯದ ಆಡಳಿತವು ಜನ ಸಾಮಾನ್ಯರಿಗೆ ತಿಳಿಯುವ ಭಾಷೆಯಲ್ಲಿಯೇ ನಡೆಯುವಂತೆ ಮಾಡಲು ಈ ಕಾರ್ಯ ಅತ್ಯಗತ್ಯ. ದೂರದರ್ಶನದಲ್ಲಿ ಇನ್ನೂ ಹೆಚ್ಚು ಕಾರ್ಯಕ್ರಮಗಳನ್ನು ಕನ್ನಡದಲ್ಲಿಯೇ ಪ್ರಸಾರ ಮಾಡುವಂತೆ ನನ್ನ ಸರ್ಕಾರವು ಭಾರತ ಸರ್ಕಾರವನ್ನು ಕಳಕಳಿಯಿಂದ ಕೋರುತ್ತದೆ.

ರಾಜ್ಯದ ಅನೇಕ ಯೋಜನೆಗಳು ಮತ್ತು ಕಾರ್ಯಕ್ರಮಗಳಿಗೆ ಭಾರತ ಸರ್ಕಾರದ ಅನುಮೋದನೆ ದೊರೆಯದೆ ಅವು ಹಾಗೆಯೇ ಉಳಿದಿವೆ ಎಂಬುದು ಮಾನ್ಯ ಸದಸ್ಯರಿಗೆ ತಿಳಿದ ವಿಷಯವೇ ಆಗಿದೆ. ಅವುಗಳ ಪೈಕಿ ಮುಖ್ಯವಾದವುಗಳೆಂದರೆ ವಿಜಯನಗರ ಉಕ್ಕು ಕಾರ್ಖಾನೆ, ಮಂಗಳೂರಿನ ಸಂಯೋಜಿತ ತೈಲ ಶುದ್ಧೀಕರಣ ಮತ್ತು ಪೆಟ್ರೋಕೆಮಿಕಲ್ಸ್ ಕಾಂಪ್ಲೆಕ್ಸ್ ಮತ್ತು ರೈಲು ಮಾರ್ಗದ ವ್ಯವಸ್ಥೆ ಹಾಗೂ ಶಾಖೋತ್ಪನ್ನ ಯೋಜನೆಗಳ ಅಭಿವೃದ್ಧಿ ಕಾರ್ಯ ಮುಂತಾದುವು. ನಾನು ಈ ಮೊದಲೇ ತಿಳಿಸಿದಂತೆ ಭಾರತ ಸರ್ಕಾರವು ಒಕ್ಕೂಟ ವ್ಯವಸ್ಥೆಯ ದೇಶವಾಗಿದೆ. ರಾಜಕೀಯ ನೀತಿ ನಿಷ್ಠೆಗಳೇನೇ ಇರಲಿ, ನಮ್ಮ ರಾಷ್ಟ್ರದ ಪ್ರಗತಿಗಾಗಿ ನಾವೆಲ್ಲ ಒಂದಾಗೂಡಿ ದುಡಿಯಬೇಕು. ಈ ದಿಸೆಯಲ್ಲಿ ಕರ್ನಾಟಕಕ್ಕೆ ಸೂಕ್ತವಾಗಿ ದೊರಕಬೇಕಾದ ಪಾಲನ್ನು ಭಾರತ ಸರ್ಕಾರ ನೀಡುತ್ತದೆ ಎಂದು ನನ್ನ ಸರ್ಕಾರ ನಿರೀಕ್ಷಿಸುತ್ತದೆ.

ಸನ್ಮಾನ್ಯ ಸದಸ್ಯರೆ, ಕರ್ನಾಟಕ ವಿಧಾನ ಮಂಡಲಕ್ಕೆ ಸುದೀರ್ಘ ಇತಿಹಾಸವಿದೆ. ನೀವು ಸಂಸದೀಯ ಪ್ರಜಾಸತ್ತೆಯ ಉತ್ಕೃಷ್ಟತ ಪರಂಪರೆಯನ್ನು ಕಾಪಾಡಿಕೊಂಡು ಬಂದಿರುವಂಥ ಈ ಸಂಸ್ಥೆಗೆ ಸೇರಿದವರಾಗಿರುವುದು ನಿಸ್ಸಂಶಯವಾಗಿಯೂ ನಿಮಗೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ. ಸಾರ್ವತ್ರಿಕ ಚುನಾವಣೆಗಳು ಈಗಷ್ಟೆ ಮುಗಿದಿದ್ದು, ರಾಜ್ಯದ ಜನತೆ ನಿಮ್ಮಿಂದ ಬಹಳಷ್ಟನ್ನು ನಿರೀಕ್ಷಿಸುತ್ತಿದೆ. ನಮ್ಮ ರಾಜ್ಯದ ಜನತೆಯ ನಿರೀಕ್ಷೆಗಳನ್ನು ಈಡೇರಿಸುವ ದಿಶೆಯಲ್ಲಿ ನಿಮ್ಮ ಚರ್ಚೆಗಳಲ್ಲಿ ನೀವು ಪ್ರಾಮಾಣಿಕವಾಗಿ ಮತ್ತು ಅರ್ಪಣಾ ಮನೋಭಾವದಿಂದ ಪ್ರಯತ್ನಿಸುವಿರೆಂಬ ಅಚಲ ನಂಬಿಕೆ ನನಗಿದೆ.

ನಿಮ್ಮ ಪ್ರಯತ್ನಗಳಿಗೆ ಸಂಪೂರ್ಣ ಯಶಸ್ಸು ದೊರೆಯಲೆಂದು ಹಾರೈಸುತ್ತೇನೆ.

ಜೈಹಿಂದ್ ಜೈ ಕರ್ನಾಟಕ

(ಸದನವು ಳ.ಗಿಲ್ಲೆಕ್ಕೆ ಪುನ: ಸಮಾವೇಶಗೊಂಡಿತು)

(ಅಧ್ಯಕ್ಷರಾದ ಶ್ರೀ ಎಸ್.ಎಂ. ಕೃಷ್ಣರವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

ಸಂತಾಪ ಸೂಚಕ ನಿರ್ಣಯ

ಅಧ್ಯಕ್ಷರು :-

೧. ಮಾಜಿ ವಿಧಾನ ಸಭಾ ಸದಸ್ಯರಾಗಿದ್ದ ಶ್ರೀ ಪಿ. ಡಿ. ಬಂಗೇರ ಅವರು ದಿನಾಂಕ ೧೮ನೇ ಏಪ್ರಿಲ್ ೧೯೮೯ರಂದು ನಿಧನರಾದರು. ಮಾನ್ಯರು ಐದನೇ ವಿಧಾನ ಸಭೆಯ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

೨. ಮಾಜಿ ವಿಧಾನ ಸಭಾ ಸದಸ್ಯರಾಗಿದ್ದ ಶ್ರೀ ಎಸ್. ರಾಚಯ್ಯ ಅವರು ದಿನಾಂಕ ೨೨ನೇ ಏಪ್ರಿಲ್ ೧೯೮೯ರಂದು ನಿಧನರಾದರು. ಮಾನ್ಯರು ಎರಡನೇ ಹಾಗೂ ಮೂರನೇ ವಿಧಾನ ಸಭೆಯ ಸದಸ್ಯರಾಗಿದ್ದರು. ೧೯೭೦ ರಿಂದ ೧೯೭೬ರವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಅವರು ೧೯೫೮–೬೨ರಲ್ಲಿ ಕೃಷಿ, ಅಬಕಾರಿ ಮತ್ತು ಸಮಾಜ ಕಲ್ಯಾಣ ಸಚಿವರಾಗಿದ್ದರು ಹಾಗೂ ಅಕ್ಟೋಬರ್, ೧೯೭೪ ರಿಂದ ಜೂನ್, ೧೯೭೬ರವರೆಗೆ ಗ್ರಾಮೀಣಾ ಅಭಿವೃದ್ಧಿ ಮತ್ತು ಸಮಾಜ ಕಲ್ಯಾಣ ಮಂತ್ರಿಯಾಗಿದ್ದರು.

೩. ಮಾಜಿ ವಿಧಾನ ಸಭಾ ಸದಸ್ಯರಾಗಿದ್ದ ಶ್ರೀ ವಿ. ಮುನಿಯಪ್ಪ ಅವರು ದಿನಾಂಕ ೨ನೇ ಮೇ, ೧೯೮೯ರಂದು ನಿಧನರಾದರು. ಮಾನ್ಯರು ಮೊದಲನೇ, ಮೂರನೇ, ಐದನೇ ಹಾಗೂ ಆರನೇ ವಿಧಾನ ಸಭೆಯ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಇವರು ದಿನಾಂಕ ೧೪ನೇ ನವೆಂಬರ್, ೧೯೭೯ ರಿಂದ ೭ನೇ ಜನವರಿ, ೧೯೮೦ ರವರೆಗೆ ಮುಜರಾಯಿ ರಾಜ್ಯ ಮಂತ್ರಿಯಾಗಿದ್ದರು.

೪. ಮಾಜಿ ವಿಧಾನ ಸಭಾ ಸದಸ್ಯರಾಗಿದ್ದ ಶ್ರೀ ಎಂ.ವಿ. ರುದ್ರಪ್ಪ ಅವರು ದಿನಾಂಕ ೨೦ನೇ ಜುಲೈ, ೧೯೮೯ರಂದು ನಿಧನರಾದರು. ಮಾನ್ಯರು ಐದನೇ ವಿಧಾನ ಸಭೆಯ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

೫. ಮಾಜಿ ವಿಧಾನ ಸಭಾ ಸದಸ್ಯರಾಗಿದ್ದ ಶ್ರೀ ಬಿ.ಜಿ. ಚವಾಣ್ ಅವರು ದಿನಾಂಕ ೨೫ನೇ ಜುಲೈ, ೧೯೮೯ರಂದು ನಿಧನರಾದರು. ಮಾನ್ಯರು ಆರನೇ ವಿಧಾನ ಸಭೆಯ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

೬. ಮಾಜಿ ಪ್ರಜಾಪ್ರತಿನಿಧಿ ಸಭಾ ಸದಸ್ಯರಾಗಿದ್ದ ಶ್ರೀ ಎಸ್.ಕೆ. ವೆಂಕಟರಂಗ ಆಯ್ಯಂಗಾರ್ ಅವರು ದಿನಾಂಕ ೧೨ನೇ ಆಗಸ್ಟ್ ೧೯೮೯ ರಂದು ನಿಧನರಾದರು. ಮಾನ್ಯರು ೧೯೫೪ ರಿಂದ ೧೯೫೬ ರವರೆಗೆ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ

೭. ಮಾಜಿ ವಿಧಾನ ಸಭಾ ಸದಸ್ಯೆಯಾಗಿದ್ದ ಶ್ರೀಮತಿ ಕೆ. ಲೀಲಾವತಿ ರೈ ಅವರು ದಿನಾಂಕ ೨೩ನೇ ಆಗಸ್ಟ್, ೧೯೮೯ ರಂದು ನಿಧನರಾದರು. ಮಾನ್ಯರು ನಾಲ್ಕನೇ ವಿಧಾನ ಸಭೆಯ ಸದಸ್ಯರಾಗಿದ್ದರು.

೮. ಮಾಜಿ ವಿಧಾನ ಸಭಾ ಸದಸ್ಯರಾಗಿದ್ದ ಶ್ರೀ ಕೆ.ಎಂ. ಪುಟ್ಟಸ್ವಾಮಿ ಅವರು ದಿನಾಂಕ ೧೯ನೇ ಆಗಸ್ಟ್ ೧೯೬೯ ರಂದು ನಿಧನರಾದರು. ಮಾನ್ಯರು ನಾಲ್ಕನೇ ವಿಧಾನ ಸಭೆಯ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

ಮಾಜಿ ಪ್ರಜಾಪ್ರತಿನಿಧಿ ಸಭೆಯ ಸದಸ್ಯರು ಹಾಗೂ ಮಾಜಿ ವಿಧಾನ ಸಭಾ ಸದಸ್ಯರಾಗಿದ್ದ ಶ್ರೀ ಕೆ. ಕೆಂಚಪ್ಪ ಅವರು ದಿನಾಂಕ ೨ನೇ ಅಕ್ಟೋಬರ್, ೧೯೬೯ ರಂದು ನಿಧನರಾದರು. ೧೯೪೧ ರಿಂದ ೧೯೪೬ರವರೆಗೆ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. ಮಾನ್ಯರು ಎರಡನೇ ವಿಧಾನ ಸಭೆಯ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

೧೦. ಮಾಜಿ ವಿಧಾನ ಸಭಾ ಸದಸ್ಯರಾಗಿದ್ದ ಶ್ರೀ ಕೆ. ದೇವಯ್ಯ ಅವರು ದಿನಾಂಕ ೧೧ನೇ ಅಕ್ಟೋಬರ್ ೧೯೬೯ ರಂದು ನಿಧನರಾದರು. ಮಾನ್ಯರು ಮೂರನೇ ವಿಧಾನ ಸಭೆಯ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

೧೧. ಮಾಜಿ ವಿಧಾನ ಸಭಾ ಸದಸ್ಯರಾಗಿದ್ದ ಶ್ರೀ ಷೇರ್ ಖಾನ್ ಅವರು ದಿನಾಂಕ ೧೩ನೇ ಅಕ್ಟೋಬರ್ ೧೯೬೯ ರಂದು ನಿಧನರಾದರು. ೧೯೬೧ರಲ್ಲಿ ರಾಜ್ಯ ಸಭಾ ಸದಸ್ಯರಾಗಿದ್ದರು. ೧೯೬೪ರಲ್ಲಿ ಹಾಗೂ ೧೯೭೦ರಲ್ಲೂ ಸಹ ರಾಜ್ಯ ಸಭೆಗೆ ಪುನರಾಯ್ಕೆಯಾಗಿದ್ದರು. ಮಾನ್ಯರು ಆರನೇ ವಿಧಾನ ಸಭೆಯ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

೧೨. ಮಾಜಿ ವಿಧಾನ ಸಭಾ ಸದಸ್ಯರಾಗಿದ್ದ ಶ್ರೀ ಜಿ. ರಾಜಶೇಖರ ಅವರು ದಿನಾಂಕ ೨೩ನೇ ಅಕ್ಟೋಬರ್ ೧೯೬೯ರಂದು ನಿಧನರಾದರು. ಮಾನ್ಯರು ಆರನೇ ವಿಧಾನ ಸಭೆಯ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

ನಿಧನ ಹೊಂದಿದ ಸದಸ್ಯರ ಗೌರವಾರ್ಥವಾಗಿ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸದಸ್ಯರು ಒಂದು ನಿಮಿಷ ಮೌನ ಆಚರಿಸಿದರು.)

ಮೃತ ಹೊಂದಿದ ಸದಸ್ಯರ ಕುಟುಂಬದವರಿಗೆ ಈ ಸಭೆಯಲ್ಲಿ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಕಳುಹಿಸಿಕೊಡಲಾಗುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ಸುರಪುರದ ಮಾಜಿ ಶಾಸಕರಾದ ರಾಜಕುಮಾರ ನಾಯಕ್‌ರವರು ೧೯೫೭ ರಿಂದ ೧೯೬೨ ರವರೆಗೆ ಹಾಗೂ ೧೯೬೫ ರಿಂದ ೧೯೭೨ರವರೆಗೆ ಎರಡು ಅವಧಿ ಶಾಸಕರಾಗಿದ್ದರು. ಅವರು ಈಗ ನಿಧನರಾಗಿದ್ದಾರೆ. ಅವರ ಹೆಸರು ಈ ಪಟ್ಟಿಯಲ್ಲಿ ಬಿಟ್ಟು ಹೋಗಿದೆ.

ಅಧ್ಯಕ್ಷರು.—ನಾಳೆ ತೆಗೆದುಕೊಳ್ಳೋಣ.

ಪ್ರಕಟಣೆ

(ಶ್ರೀ ಡಿ.ಬಿ. ಚಂದ್ರೇಗೌಡ ಅವರನ್ನು ವಿರೋಧ ಪಕ್ಷದ ನಾಯಕರೆಂದು ಗುರುತಿಸಿರುವುದು)

ಅಧ್ಯಕ್ಷರು.—ಕರ್ನಾಟಕ ರಾಜ್ಯದ ಪ್ರದೇಶ ಜನತಾ ದಳ ಶಾಸಕಾಂಗ ಪಕ್ಷದಿಂದ ನನಗೆ ಒಂದು ಪತ್ರ ಬಂದಿದೆ. ಅದರಲ್ಲಿ ಮಾನ್ಯ ಡಿ. ಬಿ. ಚಂದ್ರೇಗೌಡರನ್ನು ವಿರೋಧ ಪಕ್ಷದ ನಾಯಕರೆಂದು ಮನ್ನಣೆ ನೀಡಬೇಕೆಂದು ಕೋರಲಾಗಿದೆ. ಹಾಗೂ ಮಾನ್ಯ ಪಿ. ಜಿ. ಆರ್. ಸಿಂಧ್ಯಾರವರನ್ನು ಉಪ ನಾಯಕರೆಂದೂ ಮತ್ತು ಬಸವರಾಜ ರಾಯರೆಡ್ಡಿಯವರನ್ನು ಮುಖ್ಯ ಸಚೇತಕರೆಂದು ಗುರುತಿಸಿದ್ದಾರೆ. ಅದರಂತೆ ಡಿ.ಬಿ. ಚಂದ್ರೇಗೌಡರನ್ನು ಈ ಮನೆಯು ವಿರೋಧ ಪಕ್ಷ ನಾಯಕರೆಂದು ಮನ್ನಣೆ ನೀಡುತ್ತಿದ್ದೇನೆ.

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷರೆ, ತಾವು ಮಾಡಿದ ಪ್ರಕಟಣೆ ನನಗೂ ನನ್ನ ಪಕ್ಷಕ್ಕೂ ಬಹಳ ಸಂತೋಷ ಮತ್ತು ಸಮಾಧಾನವನ್ನು ತಂದಿದೆ. ತಮ್ಮ ಹಾಗೆ ಶ್ರೀಮಾನ್ ಚಂದ್ರೇಗೌಡರು ಈ ಸದನಕ್ಕೆ ಈ ಮನೆಗೆ ಹೊಸಬರಲ್ಲ. ಅವರು ಈ ಮನೆಯ ಸಭಾಧ್ಯಕ್ಷರಾಗಿಯೂ ಕೆಲಸ ಮಾಡಿದ್ದಾರೆ. ಎಳೆಯ ವಯಸ್ಸಿನಲ್ಲಿ ಅನೇಕ ಅಧಿಕಾರ ವಹಿಸಿಕೊಂಡು ಕರ್ನಾಟಕ ರಾಜ್ಯದಲ್ಲಿ ಸೇವೆ ಮಾಡಿದ್ದಾರೆ. ಲೋಕ ಸಭೆಯಲ್ಲಿ ಕೂಡ ಸದಸ್ಯರಾಗಿ ರಾಷ್ಟ್ರಕ್ಕೆ ಸೇವೆ ಮಾಡಿದ್ದಾರೆ. ಅವರ ಬಗ್ಗೆ ನಾನು ಹೆಚ್ಚು ಹೇಳಬೇಕಾಗಿಲ್ಲ. ಅವರು ಸರಳ ಸ್ವಭಾವದವರು ಇದ್ದಾರೆ.

ಎಲ್ಲರ ಜೊತೆಯಲ್ಲಿ ಕೂಡಿಕೊಡು ಹೋಗಬೇಕೆನ್ನುವ ಭಾವನೆ ಹೊರತಾಗಿ ಬೇರೆ ಒಂದು ರೊಚ್ಚಿನ ಧಾಟಿಯಲ್ಲಿ ಮಾತನಾಡುವಂತಹ ವ್ಯಕ್ತಿಯಲ್ಲ. ಎಲ್ಲರಿಗೂ ಜನಪ್ರಿಯರಾಗಿ ಬೇಕಾದಂತಹ ವ್ಯಕ್ತಿಗಳಾಗಿದ್ದಾರೆ. ಸ್ವತಂ ಈ ಸದನದ ಅಧ್ಯಕ್ಷರಾಗಿ ಕೆಲಸ ಮಾಡಿದಾಗ ಅವರಿಗೆ ಸಾಕಷ್ಟು ಅನುಭವವಾಗಿದೆ. ಆಳುವ ಪಕ್ಷ ಮತ್ತು ವಿರೋಧ ಪಕ್ಷಗಳು ಜೊತೆಗೂಡಿ ಯಾವ ರೀತಿ ಈ ಸದನದಲ್ಲಿ ಕಾರ್ಯಕಲಾಪಗಳು ಸುಗಮವಾಗಿ ನಡೆದುಕೊಂಡು ಹೋಗಲಿಕ್ಕೆ ಕೆಲಸ ಮಾಡಬೇಕೆಂಬುದನ್ನು ಗಮನದಲ್ಲಿಟ್ಟುಕೊಂಡು, ಅವರು ವಿರೋಧಪಕ್ಷದ ನಾಯಕರಾಗಿ ಈ ಸಭೆಯ ಕಾರ್ಯಕಲಾಪಗಳು ಸಭೆಯ ಘನತೆ, ಗೌರವಗಳನ್ನು ಕಾಪಾಡಿಕೊಂಡು ಹೋಗುವುದಕ್ಕೆ ಸಂಪೂರ್ಣವಾಗಿ ಪ್ರಯತ್ನ ಮಾಡುತ್ತಾರೆ, ತಮಗೂ ಸಹಕಾರ ನೀಡುತ್ತಾರೆ, ಸರ್ಕಾರಕ್ಕೆ ಸಹಕಾರ ನೀಡುತ್ತಾರೆ, ನನ್ನ ಪಕ್ಷಕ್ಕೆ ಸಹಕಾರ ನೀಡುತ್ತಾರೆ ಎನ್ನುವ ಭರವಸೆಯನ್ನು ನಾನು ಹೊಂದಿದ್ದೇನೆ. ಈ ಸಂದರ್ಭದಲ್ಲಿ ನನ್ನ ಪರವಾಗಿ, ನನ್ನ ಪಕ್ಷದ ಪರವಾಗಿ ಹಾಗೂ ಸರ್ಕಾರದ ಪರವಾಗಿ ಅವರ ಜೊತೆಯಲ್ಲಿ ತಾವೇನು ಘೋಷಣೆ ಮಾಡಿದ್ದೀರಿ ಇವತ್ತು ಪದಾಧಿಕಾರಿಗಳಾಗಿ ನೇಮಕವಾಗಿರುವ ಅವರೆಲ್ಲರಿಗೂ ನನ್ನ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಸಂಪೂರ್ಣವಾದ ಸಹಕಾರವನ್ನು ನಾನು ನೀಡಬೇಕೆನ್ನುವ ಬಗ್ಗೆ ಇವತ್ತು ಬೆಳಿಗ್ಗೆ ಆ ಪಕ್ಷದ ಒಬ್ಬ ನಾಯಕರು ನಮ್ಮ ಸಂಖ್ಯಾಬಲ ಕಡಿಮೆಯಿದೆ ಎಂದು ಹೇಳಿದರು. ವಿರೋಧಪಕ್ಷದವರ ಸಂಖ್ಯೆ ಮುಖ್ಯವಲ್ಲವೆಂದು ನಾನು ಈಗಾಗಲೇ ಬಹಳ ಸಲ ಹೇಳಿದ್ದೇನೆ. ಅದರ ಗುಣಮಟ್ಟ ಮುಖ್ಯ. ಸಂಖ್ಯಾಬಲ ಇದ್ದು ಅಂತಹ ಒಂದು ವಿರೋಧಪಕ್ಷದಲ್ಲಿ ಗುಣಮಟ್ಟ ಇಲ್ಲದೇ ಇದ್ದರೆ ಪ್ರಯೋಜನವೇನು ? ಸಂಖ್ಯಾಬಲ ದೊಡ್ಡ ಪ್ರಮಾಣದಲ್ಲಿದ್ದು ಕೆಟ್ಟದಾಗಿ ನಡೆದುಕೊಂಡರೆ ಉಪಯೋಗವಿಲ್ಲ. ಸಂಖ್ಯಾಬಲದಲ್ಲಿ ಕಡಿಮೆ ಇದ್ದರೂ ಅವರು ಈ ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಸದನದ ಮುಂದೆ ಗುಣಮಟ್ಟವನ್ನು ತೋರಿಸಬಹುದು ಎನ್ನುವ ಭರವಸೆಯನ್ನು ನಾನು ಹೊಂದಿ, ಸಂಖ್ಯಾಬಲ ಕಡಿಮೆ ಇದ್ದರೂ ಈ ರೀತಿಯಲ್ಲಿ ತಮ್ಮನ್ನು ರೆಕಗ್ನೈಸ್ ಮಾಡಲಾಗಿದೆ. ನಮ್ಮಲ್ಲಿ ಸಂಖ್ಯಾಬಲ ಜಾಸ್ತಿಯಿದೆಯೆಂದು ನಾವು ಬೇರೆ ರೀತಿಯಲ್ಲಿ ವರ್ತನೆ ಮಾಡುವುದಕ್ಕಾಗುವುದಿಲ್ಲ. ವಿರೋಧಪಕ್ಷದ ನಾಯಕರಿಗೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವ ಮನ್ನಣೆ ಸಿಗಬೇಕೋ ಅದನ್ನು ಸಂಖ್ಯಾಬಲ ಏನೇ ಇರಲಿ ಮನ್ನಣೆಯನ್ನು ಸಂಪೂರ್ಣವಾಗಿ ಕೊಡುತ್ತೇವೆ ಆ ಒಂದು ಸಂಪ್ರದಾಯವನ್ನು ಎತ್ತಿಹಿಡಿಯುತ್ತೇನೆಂದು ವಿರೋಧಪಕ್ಷದ ನಾಯಕರಿಗೆ ಮಾನ್ಯ ಅಧ್ಯಕ್ಷರೇ ತಮ್ಮ ಮುಖಾಂತರ ಭರವಸೆಯನ್ನು ನೀಡುತ್ತೇನೆ. ತಾವು ಅವರು ನಾವು ಸೇರಿ ಸಭೆಯ ಕಾರ್ಯಕಲಾಪಗಳಿಗೆ ಹೋಗೋಣ, ಕರ್ನಾಟಕ ರಾಜ್ಯದ ಕೋಟಿ ಜನತೆಯ ಸೇವೆ ಮಾಡೋಣ, ಅವರ ಆಶೋತ್ತರಗಳಿಗೆ ಧ್ವನಿಗೂಡಿಸಿ ನಡೆಯೋಣ ವೆಂದು ಈ ಸಂದರ್ಭದಲ್ಲಿ ನಾನು ಹಾರೈಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಡಳಿತ ಪಕ್ಷಕ್ಕಿಂತ ತುಂಬಾ ಮಹತ್ತರವಾದ ಜವಾಬ್ದಾರಿ ವಿರೋಧ ಪಕ್ಷದ ಮೇಲಿದೆ. ಇತ್ತೀಚಿನ ವರ್ಷಗಳಲ್ಲಿ ಈ ಪ್ರಜಾಪ್ರಭುತ್ವದ ವ್ಯವಸ್ಥೆಯ ಬಗ್ಗೆ ಜನರು ಬೇಸತ್ತಿರುವುದನ್ನು ಕೇಳಿದೆ ನೆವೆ. ಇಂತಹ ಒಂದು ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರಾಗಿ ಶ್ರೀ ಡಿ.ಬಿ. ಚಂದ್ರೇಗೌಡರು ಆಯ್ಕೆಯಾಗಿರುವುದನ್ನು ಭಾರತೀಯ ಜನತಾಪಾರ್ಟಿಯ ಪರವಾಗಿ ನಾನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತೇನೆ ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆ ಕಡೆ ಕುಳಿತಿರುವ ಅನೇಕ ಸದಸ್ಯರ ಮನಸ್ಸಿನಲ್ಲಿ ಈ ರಾಜ್ಯದ ಜನತೆಯ ಬಗ್ಗೆ ಅನೇಕ ವಿಷಯಗಳನ್ನು ವ್ಯಕ್ತಪಡಿಸಬೇಕೆಂಬ ಅಭಿಪ್ರಾಯ ಇದ್ದರೂ ಸಹ ಇವತ್ತಿನ ಆಡಳಿತ ವ್ಯವಸ್ಥೆಯಲ್ಲಿ ಆಡಳಿತ ಪಕ್ಷದಲ್ಲಿ ಅವರು ಕುಳಿತು ಧೈರ್ಯವಾಗಿ ಮಾತನಾಡುವುದು ಕಷ್ಟವಾಗಬಹುದು. ಅವರ ಅಭಿಪ್ರಾಯಗಳನ್ನು ಬೇರೆ ರೂಪದಲ್ಲಿ ತಿಳಿಸುವ ಪ್ರಯತ್ನ ನಡೆಯುತ್ತಿದೆ. ಈ ಒಂದು ಸಂದರ್ಭದಲ್ಲಿ ಈ ರಾಜ್ಯದ ರೈತರ, ಜನಸಾಮಾನ್ಯರ, ನಿರುದ್ಯೋಗಿ ಯುವಕರ ಅನೇಕ ಸಮಸ್ಯೆಗಳನ್ನು ನಾವು ನೋಡುತ್ತಿರತಕ್ಕಂಥ ಸಂದರ್ಭದಲ್ಲಿ ದಯವಮಾಡಿ ಅಧಿಕಾರಕ್ಕೆ ಬಂದಿರುವ ಸರ್ಕಾರ, ತಾವು ಸಾಕಷ್ಟು ಸಮಯ ತೆಗೆದುಕೊಂಡಿದ್ದೀರಿ. ಮುಂದೆ ಬರುವ ದಿವಸಗಳಲ್ಲಿ ಜನಪರ ಕಾರ್ಯಕ್ರಮಗಳನ್ನು ರೂಪಿಸಿ, ಜನರ ಹಿತದೃಷ್ಟಿಯಿಂದ ಕೆಲಸ ಮಾಡುತ್ತೀರಿ ಎಂಬ ವಿಶ್ವಾಸ ನಮಗೆ ಇದೆ. ಇಂತಹ ಒಂದು ಸಂದರ್ಭದಲ್ಲಿ ನಮ್ಮ ರಾಜ್ಯ ಸರ್ಕಾರ, ಮತ್ತು ಕೇಂದ್ರದಲ್ಲಿ ರಾಜ್ಯಸಭಾಸದಸ್ಯರಾಗಿ ಬೇರೆ ಬೇರೆ ಸ್ಥಾನಗಳನ್ನು ಹೊಂದಿ ಅಪಾರವಾದ ಅನುಭವ ಇರತಕ್ಕಂಥ ಒಬ್ಬ ವ್ಯಕ್ತಿ ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾಗಿದ್ದಾರೆ. ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ಶ್ರೀ ಚಂದ್ರೇಗೌಡರಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತಾ ನಾನು ಅವರಿಗೆ ಎಲ್ಲಾ ರೀತಿಯ ಸಹಕಾರ ಕೊಡುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಈಗ ತಾವು ಜನತಾದಳದ ಅಧ್ಯಕ್ಷರು ಬರೆದಿರತಕ್ಕ ಪತ್ರವನ್ನು ಓದಿದ್ದೀರಿ. ಶ್ರೀ ಡಿ.ಬಿ. ಚಂದ್ರೇಗೌಡರು ನಮ್ಮ ಪಕ್ಷದ ಮುಖಂಡರಾಗಿ ಕಾರ್ಯನಿರ್ವಹಿಸುತ್ತಾರೆ. ಎಂದು ಅವರು ಏನು ಬರೆದಿದ್ದಾರೆ, ಅದರ ಪ್ರಕಾರ ಅವರು ವಿರೋಧಪಕ್ಷದ ನಾಯಕರಾಗಿದ್ದಾರೆ ಎಂದು ತಾವು ತಿಳಿಸಿದ್ದೀರಿ. ಈ ಒಂದು ಸಭೆಯಲ್ಲಿ ಜನತಾ ದಳದ ಜೊತೆಯಲ್ಲಿ ಮಿಕ್ಕ ಅನೇಕ ಪಕ್ಷಗಳು, ನಾವು ಸಹ ಇದ್ದೇವೆ. ಶ್ರೀಮಾನ್ ಚಂದ್ರೇಗೌಡರು ಎಲ್ಲರನ್ನೂ ತಮ್ಮ ಜೊತೆಯಲ್ಲಿ ತೆಗೆದುಕೊಂಡು ಒಟ್ಟಾರೆ ಈ ಸದನದಲ್ಲಿ ಒಮ್ಮತದಿಂದ ವಿರೋಧ ಪಕ್ಷವಾಗಿ ಕೆಲಸ ಮಾಡತಕ್ಕಂಥ ಶಕ್ತಿ ಅವರಿಗೆ ಇದೆಯೆಂದು ನಾನು ಅಂದುಕೊಂಡಿದ್ದೇನೆ. ಬಹುಶ: ಅವರು ರಾಜ್ಯಸಭಾ ಸದಸ್ಯತ್ವಕ್ಕೆ ರಾಜೀನಾಮೆ ಕೊಡುವುದಿಲ್ಲ, ಶಾಸನಸಭೆಯ ಸ್ಥಾನಕ್ಕೆ ರಾಜೀನಾಮೆ ಕೊಡುತ್ತಾರೋ ಏನೋ ಎನ್ನುವ ಅಭಿಪ್ರಾಯ ಇತ್ತು. ಆದರೆ ಅವರು ರಾಜ್ಯಸಭೆಗೆ ರಾಜೀನಾಮೆ ನೀಡಿ ಈ ಸದನದಲ್ಲಿ ಉಳಿದಿದ್ದಾರೆ. ಇದು ನಿಜಕ್ಕೂ ಬಹಳ ಸಂತೋಷದ ವಿಷಯ. ಇದರಿಂದ ವಿರೋಧ ಪಕ್ಷಕ್ಕೆ ಒಂದು ಶಕ್ತಿ ಬಂದಂತಾಗಿದೆ ಎಂದು ಹೇಳಿ ಅವರನ್ನು ನಾನು ಅತ್ಯಂತ ಪ್ರಾಮಾಣಿಕವಾಗಿ ಸ್ವಾಗತಿಸುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧಪಕ್ಷದ ನಾಯಕರು).—ಸಭಾಧ್ಯಕ್ಷರೇ ತಾವು ಅಧಿಕೃತವಾಗಿ ಜನತಾದಳವನ್ನು ಮಾನ್ಯತೆ ಪಡೆದ ಒಂದು ಪಕ್ಷ ಮತ್ತು ಅದಕ್ಕೆ ನನ್ನನ್ನು ನಾಯಕನೆಂದು ಗುರುತಿಸಿದ್ದೀರಿ. ಮೊದಲನೆಯದಾಗಿ ನಾನು ತಪ್ಪಾಗೆ ನನ್ನ ವಂದನೆಗಳನ್ನು ಸಮರ್ಪಣೆ ಮಾಡುತ್ತಾ, ಸದನದ ನಾಯಕರು ಹಲವು ಗಂಭೀರವಾದ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮೊದಲನೆಯದಾಗಿ ನಮ್ಮ ಕೆಲಸ ಈ ಸದನದ ಗೌರವವನ್ನು, ಕೀರ್ತಿಯನ್ನು ಮತ್ತು ಪ್ರತಿಷ್ಠೆಯನ್ನು ಎತ್ತಿಹಿಡಿಯುವುದು. ಆದರೆ ಈ ವಿಚಾರದಲ್ಲಿ ನಾನು ತಮ್ಮ ಮೂಲಕ ಈ ಸದನಕ್ಕೆ ಹೇಳಬಯಸುತ್ತೇನೆ. .. ಯಾವುದೇ ಸಂದರ್ಭದಲ್ಲಿ ಈ ಘನತೆಗೆ ಧಕ್ಕೆ ಬರದಹಾಗೆ, ನಮ್ಮ ಪಕ್ಷದ ಸದಸ್ಯರಾಗಲೀ, ಅಥವಾ ನಾನಾಗಲೀ ನಡೆದುಕೊಳ್ಳುವುದಿಲ್ಲ. ಅಂತಹ ಸಂದರ್ಭಗಳು ಬರದಹಾಗೆ ಆಳುವ ಪಕ್ಷದವರು ನೋಡಿಕೊಳ್ಳುತ್ತಾರೆ ಮತ್ತು ಇಂಥಾದ್ದಕ್ಕೆ ಅವಕಾಶ ಕೊಡುವುದಿಲ್ಲ ಎನ್ನುವ ವಿಶ್ವಾಸವನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ಅನೇಕ ಅಕಾರ ಪ್ರಕಾರಗಳಲ್ಲಿ ನಾನು ಜೊತೆಯಲ್ಲೇ ಕೆಲಸ ಮಾಡಿದ ಬಹುಮಂದಿ ಆ ಕಡೆಯಲ್ಲಿಯೂ ಇದ್ದಾರೆ, ಈ ಕಡೆಯಲ್ಲಿಯೂ ಇದ್ದಾರೆ. ನನ್ನ ಭಾವನೆಗಳನ್ನು ಅಲ್ಲಿಯೂ ಹಂಚಿಕೊಂಡಿದ್ದೇನೆ, ಇಲ್ಲಿಯೂ ಹಂಚಿಕೊಂಡಿದ್ದೇನೆ. ಮೇಲಾಗಿ ಸಭೆಯ ಅಧ್ಯಕ್ಷನಾಗಿ ಕುಳಿತು, ಸುಮಾರು ಎರಡು ವರ್ಷಗಳ ಕಾಲ ಕೆಲಸ ಮಾಡತಕ್ಕಂಥ ಸದಪಕಾಶ ನನ್ನ ಪಾಲಿಗೆ ಬಂದಿತ್ತು. ಇವೆಲ್ಲವೂ ನಾನು ಮುಂದೆ ಮಾಡಬೇಕಾಗಿರತಕ್ಕಂಥ ಕೆಲಸಕ್ಕೆ ಮಾರ್ಗದರ್ಶನ ಮಾಡುತ್ತೇವೆ. ಹಾಗೆಯೇ ಸಭಾನಾಯಕರು ನನ್ನಿಂದ ಏನು ಆಪೇಕ್ಷೆ ಮಾಡಿದ್ದಾರೆ, ಆ ಅಪೇಕ್ಷಿತ ಕೆಲಸವನ್ನು ಮಾಡುತ್ತೇನೆ. ಎಲ್ಲಾ ರಾಜ್ಯದ ಜನಕ್ಕೆ ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ ಅದಕ್ಕೆ ಅಬ್ಜಕ್ಟೀವ್ ಸಪೋರ್ಟ್ ಮಾಡುತ್ತದೆ. ಜೊತೆಗೆ ಎಲ್ಲಿ ಜನವಿರೋಧಿ ಕೆಲಸ ಮಾಡುತ್ತದೆ, ಅದಕ್ಕೆ ಅಷ್ಟೇ ಪ್ರಬಲ ವಿರೋಧ ವ್ಯಕ್ತ ಮಾಡಬೇಕಾಗುತ್ತದೆ ಎನ್ನುವ ಸೂಚನೆಯನ್ನು ಕೊಟ್ಟು, ನನ್ನ ಜೊತೆಯಲ್ಲಿಯೇ ಕೆಲಸ ಮಾಡತಕ್ಕಂಥ ಅನುಭವಿಗಳೂ, ರಾಷ್ಟ್ರೀಯ ಪಕ್ಷದ ಹಿರಿಯ ಸದಸ್ಯರೂ ಆದ ಬಿ.ಜೆ.ಪಿ.ಯ ಮಾನ್ಯ ಯಡಿಯೂರಪ್ಪನವರು ಏನು ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ ಅದಕ್ಕೆ ನನ್ನ ಸಂಪೂರ್ಣ ಸಹಮತವನ್ನು ಕೋರುತ್ತೇನೆ. ಮಾನ್ಯ ಶ್ರೀ ವಾಟಾಳ್ ನಾಗರಾಜ್‌ರವರೂ ಕೂಡ ಮಾನ್ಯತೆ ಮಾಡಿದ ಪಕ್ಷದಿಂದ ಬಂದಿದ್ದಾರೆ, ಅವರೂ ಕೂಡ ವಿಶೇಷವಾದ ವ್ಯಾಮೋಹವನ್ನು ಇಟ್ಟುಕೊಳ್ಳದೆ, ಪ್ರತಿಪಕ್ಷದಲ್ಲಿ ಕುಳಿತ ಎಲ್ಲಾ ಸದಸ್ಯರೂ ಸಮಾನವಾದ ಅವಕಾಶ, ಅಧಿಕಾರ ಇಟ್ಟುಕೊಂಡು, ನಮ್ಮ ಪಕ್ಷದ ಕಾರ್ಯಕ್ರಮಗಳಿಗೆ ವಿರೋಧ ಇಲ್ಲದೆ, ರಾಜ್ಯದ ಜನರ ಸಮಸ್ಯೆಯ ವಿಚಾರಲ್ಲಿದ ನಾವೆಲ್ಲರೂ ಒಟ್ಟಿಗೆ ಕುಳಿತು ಚರ್ಚೆ ಮಾಡಿ, ನಿರ್ಣಯಕ್ಕೆ ಬಂದು ಈ ಸದನದಲ್ಲಿ ಮುಕ್ತವಾಗಿ ಚರ್ಚೆಯನ್ನು ಮಾಡೋಣ. ಎಡ ಭಾಗದಲ್ಲಿ ಕುಳಿತಿರತಕ್ಕಂಥ ನನ್ನ ಎಲ್ಲಾ ರಾಜಕೀಯ ಪಕ್ಷಗಳಿಗೂ, ಮುಖಂಡರುಗಳಿಗೂ ಈ ಮಾತನ್ನು ಹೇಳುತ್ತಾ, ನನ್ನ ಕಾರ್ಯ ಸುಗಮವಾಗಿ ನಡೆಯಬೇಕೆಂದೂ, ತಮ್ಮ ಸಹಾಯ ಅತ್ಯಂತ ಅಗತ್ಯ ಮುಂದೆ ನಡೆಯತಕ್ಕಂಥ ದಿನಗಳಲ್ಲಿ ನಿಮ್ಮ ಸಹಕಾರದ ಹಸ್ತವನ್ನು ಅಪೇಕ್ಷೆ ಮಾಡಿ ನನ್ನ ಬಗ್ಗೆ ಒಳ್ಳೆಯ ಮಾತನಾಡಿದ ಎಲ್ಲಾ ಸದಸ್ಯರಿಗೂ ಕೃತಜ್ಞತೆಯನ್ನು ಸಮರ್ಪಣೆ ಮಾಡಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ನಾನು ಮಾಡಿದ ಪ್ರಕಟಣೆಗೆ ಮುಖ್ಯಮಂತ್ರಿಗಳು ಅಭಿವ್ಯಕ್ತಪಡಿಸಿದ ಸದ್ಭಾವನೆಗಳು, ಈ ಸದನದ ಕಾರ್ಯಕಲಾಪಗಳು ಯಶಸ್ವಿಯಾಗಿ, ಮತ್ತು ಸಸೂತ್ರವಾಗಿ ನಡೆದುಕೊಂಡು ಹೋಗುವುದಕ್ಕೆ ಕಾರಣೀಭೂತವಾತವಾಗುತ್ತವೆಂದು ಭಾವನೆ ಮಾಡಿ, ಈಗತಾನೆ ಅಧಿಕೃತವಾಗಿ ವಿರೋಧಪಕ್ಷದ ನಾಯಕರಾಗಿ ನೇಮಿಸಿರತಕ್ಕಂಥ ಮಾನ್ಯ ಚಂದ್ರೇಗೌಡರಿಗೆ ನನ್ನ ವೈಯಕ್ತಿಕವಾದ ಶುಭ ಕಾಮನೆಗಳನ್ನು ಅರ್ಪಿಸಿ, ತಮ್ಮ ಸಹಕಾರದಿಂದ ಈ ಮನೆಯ ಕೆಲಸಕಾರ್ಯಗಳೆಲ್ಲವನ್ನೂ ಕೂಡ

ಸಮಾಧಾನದಿಂದ, ಸಂಯಮದಿಂದ, ಮತ್ತು ಗಾಂಭೀರ್ಯದಿಂದ ನಡೆಸಿಕೊಂಡು ಹೋಗತಕ್ಕಂಥ ಶಕ್ತಿಯನ್ನು ನಾವೆಲ್ಲಾ ಪಡೆದುಕೊಳ್ಳೋಣ ಎಂದು ಆಶಿಸುತ್ತೇನೆ.

ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿ.—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಯನ್ನು ಸಭೆಯಲ್ಲಿ ಮಂಡಿಸುತ್ತೇನೆ.

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ, ರಾಜ್ಯಪಾಲರಿಂದ ಅಥವಾ ರಾಷ್ಟ್ರಾಧ್ಯಕ್ಷರಿಂದ ಸಂದರ್ಭಾನುಸಾರ ಒಪ್ಪಿಗೆ ಪಡೆದ ವಿಧೇಯಕರ ಪಟ್ಟಿಯನ್ನು ಸಭೆಯಲ್ಲಿ ಮಂಡಿಸುತ್ತೇನೆ.

S.l. No.	Name of the Bill	Date of Assent	Assented by
1	2	3	4
1	The Karnataka payment of Subsistence Allowance Bill, 1988.	15-4-1988	Governor
2	The Karnataka Agricultural Income tax (Amendment) Bill, 1988	26-7-1988	,,
3	The Karnataka Motor Vehicles Taxation (Amendment) Bill, 1988	17-10-1988	,,
4	The Karnataka Appropriation (No. 4) Bill, 1988	20-1-1989	,,
5	The Karnataka Civil Court (Laws Amendment) Bill 1988	20-1-1989	,,
6	The Karnataka State universities (Second Amendment) Bill 1988.	20-1-1989	,,
7	The Karnataka State Universities (Amendement) Bill, 1988	3-2-1989	,,
8	The Karnataka Court Fees and Suits Valuation (Amendment) Bill, 1989	3-2-1989	,,
9	The Karnataka Legal aid Board (Amendment) Bill 1988.	22-2-1989	,,
10	The Karnataka Appropriation Bill, 1989	31-3-1989	
11	The Karnataka Appropriation Bill (Vote on Account) 1989	31-3-1989	,,
12	The Karnataka Entertainments Tax (Amendment) Bill, 1989	16-4-1989	,,
13	The Mysore Betting Tax (Amendment) Bill, 1989.	16-4-1989	,,
14	The Karnataka Motor Vehicles Taxation (Amendment) Bill, 1989.	16-4-1989	,,

15	The Karnataka Agricultural Income tax (Amendment) Bill, 1989	16-4-1989	
16	The Karnataka Tax on Luxuries (Hotels and lodging houses) (Amendment) Bill, 1989	16 4-1989	"
17	The Karnataka Tax on entry of goods in to local areas for consumption, use or sale therein (Amendment) Bill, 1989.	16-4-1989	
18	The Karnataka tax on profession, trades calling & employment (Amendment) Bill, 1989	16-4-1989	"
19	The Karnataka Sales tax (Amendment) Bill. 1989	16-4-1989	"
20	The Karnataka Legislature prevention of disqualification (Amendment) Bill, 1989	25-4-1989	"
21	The Karnataka Relief Undertakings (Special Provision) (Amendment) Bill, 1989,	29-5-1989	"
22	The Registration (Karnataka Amendment) Bill, 1989	13-6-1989	President

ಅಧ್ಯಕ್ಷರು.— ಮಂಡಿಸಲಾಯಿತು. ಈಗ ಸಭೆಯನ್ನು ನಾಳೆ ಬೆಳಿಗ್ಗೆ ೧೧ ಗಂಟೆಗೆ ಮುಂದೂಡಲಾಗಿದೆ.

(ಸದನವು ಸಂಜೆ ೫–೨೦ಕ್ಕೆ ಮುಂಕ್ಕಾಯಗೊಂಡಿತು ಮತ್ತೆ ೧೯–೦೨–೮೯ನೇ ಮಂಗಳವಾರ ಬೆಳಿಗ್ಗೆ ೧೧ ಗಂಟೆಗೆ ಸೇರಲು ನಿಶ್ಚಯಿಸಿತು)